
ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಕಲ್ಯಾಣ ಕಿರಣ

ಫೆಬ್ರವರಿ 2016

ಶರಣರ ನಡೆ ಮುಕ್ತಿಯ ಕಡೆ









ಧರ್ಮಸ್ಥಳದ
ಚಿತ್ರಣಗಳು

ಶರಣು ಶರಣಾ[redacted]

ಬಸವನಾ ಒಲವಿನಿಂದ ಕಾ[redacted] ದೇಗುಲವಾಯ್ತು, ಕಾಯ[redacted]ಯ್ತು, ಬಸವನಾ ಅರಿವಿನಿಂ[redacted]

ಕಾಯದ ವ[redacted]ನಯ್ಯಾ ಕಾಯವ ದುಡಿಸಿ, ಇ[redacted]ಯ್ಯಾ, ಕಾಯವನು ತೊರೆದ[redacted]ಯೂ ಸಲ್ಲುವಂತೆ ಮಾಡಾ ಎ[redacted] ಬಸವ ದೇವಾ..!

– ಶಿವಾನಂದ ಕಲಗೊಂಡ

ಫೆಬ್ರವರಿ, ಮಾರ್ಚ್

ಹಬ್ಬ, ಹುಣ್ಣಿಮೆಗಳು


ಫೆ-22 ಚನ್ನ ಹುಣ್ಣಿಮೆ
ಉಳವಿ ಚನ್ನಬಸವೇಶ್ವರ ರಥೋತ್ಸವ
ಮಾ-7: ಮಹಾಶಿವರಾತ್ರಿ
ಮಾ-13: ಪೂಜ್ಯಶ್ರೀ ಮಾತೆ ಮಹಾದೇವಿ ಅವರ
[redacted]71ನೇ ವರ್ಧಂತಿ

[redacted]ಸಂಪಾದಕೀಯ
[redacted]ಾ. ಮಾತೆ ಮಹಾದೇವಿ,
ಪೂ[redacted]ತೆ ಕಸ್ತೂರಿ ದೇವಿ,
ಪೂಜ್ಯ ಶ್ರೀ[redacted]ಾರ ಸ್ವಾಮೀಜಿ,
ಅಕ್ಷ[redacted]ದೆ
ಬಸವ [redacted]
ಪುಟ ವಿನ್ಯ[redacted]
ಪುನೀತ್.ಎಂ.ಜಿ.
ಪ್ರಸಾರ ಮೇಲ್ವಿಚಾರಣ[redacted]
ಆರ್.ಎಸ್.ಹೊನ್ನಪ್ಪನವರ್

ಪಂಚವಾರ್ಷಿಕ ಸದಸ್ಯತ್ವ : 1000 ರೂಪಾಯಿ
ವಾರ್ಷಿಕ ಚಂದಾ : 200 ರೂಪಾಯಿ

॥ ಓಂ ಶ್ರೀ [redacted]ಗಾಯ ನಮಃ ॥

ಸಂಪುಟ – 47 [redacted]ಸವ ಶಕೆ – 882
ಸಂಚಿಕೆ – 02 [redacted]ುವರಿ – 2016



[redacted]lyana Kirana-R.No.19988/70. Monthly Magzine [redacted] and published by Pujya kasthuridevi on behalf [redacted] Kalyana Mission chratible trust, Basava [redacted]5, 20th main, 2nd block, Rajajina[redacted]
B[redacted]10.
[redacted]31476. SMS-9945[redacted]
E-m[redacted]kirana1970[redacted]

ಸಂಪಾದಕರ ನುಡಿ

ಮಾತಾಜಿ



ಧರ್ಮಸ್ಥಳದ ಶಾಂತಿವನದಲ್ಲಿ ಕೆಲವೊಂದು ದಿನ


ಉಜಿರೆಯ ವ್ಯಾಪ್ತಿಯಲ್ಲಿ ಬರುವ ಸುಮಾರು ಹತ್ತು ಎಕರೆ ಪ್ರದೇಶದಲ್ಲಿ ಶಾಂತಿವನ ಟ್ರಸ್ಟ್ ಅನ್ನು 1987ರಲ್ಲಿ ಶ್ರೀ ವೀರೇಂದ್ರ ಹೆಗ್ಗಡೆಯವರು ಸ್ಥಾಪಿಸಿದರು. ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆಯನ್ನು ಸ್ಥಾಪಿಸುವ ಮೂಲಕ ದೇಶೀಯ ಚಿಕಿತ್ಸಾ ಪದ್ಧತಿಯ ಪುನರುತ್ಥಾನಕ್ಕೆ ಕಾರಣರಾದರು. ಶಾಂತಿವನ-ಹೆಸರು ಅನ್ವರ್ಥಕವಾಗುವಂತಹ ಪರಿಸರ ಹೊಂದಿದೆ. ವಿಶಾಲವಾದ ಆವರಣ, ಮುಗಿಲೆತ್ತರಕ್ಕೆ ಬೆಳೆದು ನಿಂತ ಬೃಹದಾಕಾರದ ವೃಕ್ಷ ಸಮೂಹದಿಂದ ಒಡಗೂಡಿದ ಕಾನನ, ಅಲ್ಲಲ್ಲಿ ಹರಿಯುವ ಕಿರುಹಳ್ಳಗಳು, ಸುಂದರವಾಗಿ ಬೆಳೆಸಿರುವ ಗಿಡಗಳು, ಮಧ್ಯ ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದಂತೆ ಇರುವ ಅರಳಿದ ಮಲ್ಲಿಗೆಯ ಕಂಟಿಗಳು, ಇವೆಲ್ಲಕ್ಕೂ ಜೀವ ತುಂಬಿದ ಹಕ್ಕಿಗಳ ಕಲರವ.

ಜ.26ರಂದು ಬೆಳಗ್ಗೆ ಶಾಂತಿವನದ ಆವರಣದಲ್ಲಿ ರಾಷ್ಟ್ರಧ್ವಜ ಧ್ವಜಾರೋಹಣವನ್ನು ನಮ್ಮ ಕಡೆಯಿಂದ ಮಾಡಿಸಿದರು. ಟ್ರಸ್ಟ್ ಕಾರ್ಯದರ್ಶಿ ಶ್ರೀ ಸೀತಾರಾಮ್, ಮುಖ್ಯ ವೈದ್ಯಾಧಿಕಾರಿ ಪ್ರಶಾಂತಶೆಟ್ಟಿ ಉಪಸ್ಥಿತರಿದ್ದರು. ಬೆಳಗ್ಗೆ 8-30ಕ್ಕೆ ಧ್ವಜಾರೋಹಣ ಮಾಡಿದ ನಂತರ ನಮ್ಮ ಚಿಕಿತ್ಸೆ ಪ್ರಾರಂಭವಾಯಿತು.

ನಾನು ಮತ್ತು ನಮ್ಮ ಜೊತೆಗಿದ್ದ ಮೂವರು ಸಾಧಕಿಯರಿಗೆ ಒಂದು ವಿಶಾಲವಾದ ಅಟ್ಯಾಚ್ಡ್ ಬಾತ್‌ರೂಂ ಇರುವ ವಿಐಪಿಸೂಟ್ ಬಿಟ್ಟುಕೊಟ್ಟಿದ್ದರು. ನಮ್ಮ ಗಾಡಿಯ ಚಾಲಕನಿಗೆ ದೂರದಲ್ಲಿ ಒಂದು ಕೋಣೆ ಕೊಟ್ಟಿದ್ದರು. ಹತ್ತುದಿನ ಆತನಿಗೆ ಏನೂ ಕೆಲಸವಿಲ್ಲವೆಂದು ನಾವು ಊರಿಗೆ ಕಳಿಸಿಕೊಟ್ಟೆವು.

ಬೆಳಗ್ಗೆ ಐದು ಗಂಟೆಗೇ ಚಟುವಟಿಕೆಗಳು ಪ್ರಾರಂಭವಾಗುತ್ತಿದ್ದವು. ಖಾಲಿ ಹೊಟ್ಟೆಗೆ ನೀರು ಮತ್ತು ನಂತರ ಬೂದುಗುಂಬಳಕಾಯಿ ರಸ ಕುಡಿಯಬೇಕು ಎಂದಾಗ ನಮ್ಮ ಪೂಜೆಯ ನೇಮವನ್ನು ಹೇಳಿದೆವು. ನಾವು 5 ಗಂಟೆಗೆ ಎದ್ದು ಸ್ನಾನ ಮತ್ತು ಇಷ್ಟಲಿಂಗ ಪೂಜೆ ಮಾಡಿಕೊಂಡು ನೀರನ್ನು ಕುಡಿದು ಯೋಗಾಸನಕ್ಕೆ ಏಳುಗಂಟೆಗೆ ಸಿದ್ಧವಾಗಿರುತ್ತಿದ್ದೆವು. ಬಾಕಿ ಎಲ್ಲರಿಗೆ ಯೋಗ ಹಾಲ್ "ತೇಜಸ್"ದಲ್ಲಿ ಸಾಮೂಹಿಕವಾಗಿ ಯೋಗಾಭ್ಯಾಸ ಬೆಳಗ್ಗೆ 6 ರಿಂದ 7 ರವರೆಗೆ ನಡೆಯುತ್ತಿತ್ತು.





ನಮಗೆ ನಾವಿದ್ದಲ್ಲಿಯೇ ಬಂದು ಒಬ್ಬ ವೈದ್ಯೆ ವ್ಯಾಯಾಮ ಮತ್ತು ಯೋಗ ಹೇಳಿಕೊಡುತ್ತಿದ್ದರು. ನಂತರ ಒಂದು ಲೋಟ ಬೂದುಗುಂಬಳಕಾಯಿ ರಸ ಕೊಡುತ್ತಿದ್ದರು. ಮತ್ತು ಸ್ವಲ್ಪ ಹೊತ್ತು ಬಿಟ್ಟು ಬಾರ್ಲಿಗಂಜಿ ಕೊಡುತ್ತಿದ್ದರು. ಹೊಟ್ಟೆ ಮತ್ತು ಕಣ್ಣಿಗೆ ಮಣ್ಣಿನ ಪಟ್ಟಿ ಹಾಕುತ್ತಿದ್ದರು. ಪಪ್ಪಾಯ ಹಣ್ಣು ಹೆಚ್ಚಿಕೊಡುತ್ತಿದ್ದರು. ಹಣ್ಣಿನಿಂದ ಸಕ್ಕರೆ ಜಾಸ್ತಿಯಾಗುವುದಿಲ್ಲವೆ? ಎಂದು ವೈದ್ಯರನ್ನು ಕೇಳಿದಾಗ , **"ಹಣ್ಣುಗಳಲ್ಲಿ ಕೇವಲ ಪಪ್ಪಾಯ ಹಣ್ಣಿಗೆ ಮಾತ್ರ ಸಕ್ಕರೆ ಕಡಿಮೆಮಾಡುವ ಶಕ್ತಿ ಇದೆ. ಕಡಿಮೆ ಆಹಾರದಿಂದ ದುರ್ಬಲತೆ ಉಂಟಾಗಬಾರದೆಂದು ಶಕ್ತಿಯ ಮರು ಪೂರೈಕೆಗೆ ಈ ಹಣ್ಣನ್ನು ಕೊಡಲಾಗುವುದು"** ಎಂದರು.

ಎಣ್ಣೆ ಮಸಾಜ್, ಸ್ಟೀಮ್ ಬಾತ್(ಉಗಿ ತೊಟ್ಟಿಯಲ್ಲಿ ಸ್ನಾನ), ಸೋನಾ

ಪುಟ 7ರಲ್ಲಿ ಮುಂದುವರಿಯುವುದು...

ಹೃತ್ಪೂರ್ವಕ ಸ್ವಾಗತ

29ನೇ ಶರಣಮೇಳದಲ್ಲಿ ವೇದಿಕೆ ಹತ್ತಲು-ಇಳಿಯಲು ನಾನು ಪಡುತ್ತಿದ್ದ ಪ್ರಯಾಸವನ್ನು ಕಂಡು ಭದ್ರಾವತಿಯ ಶರಣೆಯರು "ಪ್ರಕೃತಿ ಚಿಕಿತ್ಸಾ ಕೇಂದ್ರಕ್ಕೆ ಧರ್ಮಸ್ಥಳಕ್ಕೆ ಹೋಗಿ ಬನ್ನಿರಿ. ಅಲ್ಲಿನ ಖರ್ಚು-ವೆಚ್ಚ ಭರಿಸುವುದು ನಮ್ಮ ಭಾರ." ಎಂದು ಒತ್ತಾಯಿಸಿದರು ಬೆಂಗಳೂರಿನ ಶರಣ ಈ.ಕೃಷ್ಣಪ್ಪನವರು ತಾವು ಖರ್ಚು ಭರಿಸುವುದಾಗಿ ಎಂದೋ ಹೇಳಿಬಿಟ್ಟಿದ್ದರು. ಮುಂಬಯಿಯ ಆರ್.ಬಿ.ಹೆಬ್ಬಳ್ಳಿ ಪ್ರತಿವರ್ಷ 10 ದಿವಸ ಧರ್ಮಸ್ಥಳದಲ್ಲಿ ಪ್ರಕೃತಿ ಚಿಕಿತ್ಸೆಗಾಗಿ ಹೋಗುವ ಪರಿಪಾಠ ಇಟ್ಟುಕೊಂಡಿರುವುದರಿಂದ "ನೀವು ಮನಸ್ಸು ಮಾಡಿ ಅಲ್ಲಿಗೆ ಹೋಗಿ ಬನ್ನಿರಿ. ಅದರ ಖರ್ಚು ಭರಿಸುವುದು ನನಗೆ ಸೇರಿದ್ದು". ಎಂದು ಹೇಳುತ್ತಲೇ ಇದ್ದರು. ಈ ಸಲ ಮನಸ್ಸು ಮಾಡಿ ಶರಣ ಆರ್.ಬಿ.ಹೆಬ್ಬಳ್ಳಿಯವರಿಗೆ ತಿಳಿಸುತ್ತಲೇ ಅವರಿಗಾದ ಆನಂದ ಅಷ್ಟಿಷ್ಟಲ್ಲ. "ನಾನು ಈಗಿಂದೀಗಲೇ ಶ್ರೀ ವೀರೇಂದ್ರ ಹೆಗ್ಗಡೆಯವರಿಗೆ ಫೋನ್ ಮಾಡ್ತೇನೆ ". ಎಂದು ಹೇಳಿ ಸ್ವಲ್ಪ ಹೊತ್ತಿನಲ್ಲೇ ಪುನಃ ನಮಗೆ ಫೋನ್ ಮಾಡಿ, "ಶ್ರೀ ವೀರೇಂದ್ರ ಹೆಗ್ಗಡೆಯವರು ತುಂಬಾ ಖುಷಿಪಟ್ಟರು. ನಮಗೆ ಸೇವೆ ಮಾಡುವ ಅವಕಾಶ ಕಲ್ಪಿಸಿಕೊಟ್ಟರು. ಖಂಡಿತಾ ಬರಲಿ ಎಂದರು". ಎಂದು ಹೇಳಿದರು ಅಲ್ಲಿನ ವೈದ್ಯಾಧಿಕಾರಿ ಗಳನ್ನು ಸಂಪರ್ಕಿಸಿ ಜ.26ರಂದು ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಶಾಂತಿವನದಲ್ಲಿ ನಾವೇ ಮಾಡಬೇಕೆಂದು ಶ್ರೀ ವೀರೇಂದ್ರ ಹೆಗ್ಗಡೆಯವರು ಹೇಳಿದುದಾಗಿ ಹೆಬ್ಬಳ್ಳಿಯವರು ತಿಳಿಸಿದರು. ಜ.25ರಂದು ಬೆಂಗಳೂರಿನಿಂದ ನಮ್ಮ ಪ್ರಯಾಣ ಸಾಗಿತು. ಮಂಗಳೂರು ಹೆದ್ದಾರಿಯಲ್ಲಿ ಧರ್ಮಸ್ಥಳಕ್ಕೆ ಹೋಗುವ ತಿರುವು ಬರುತ್ತದೆ. ಧರ್ಮಸ್ಥಳಕ್ಕೆ ಹೋಗುವಾಗ ಬಲದಲ್ಲಿರುವ ಸರ್ಕಲ್‌ನಲ್ಲಿ ವೈದ್ಯಾಧಿಕಾರಿ ಡಾ.ಪ್ರಶಾಂತಶೆಟ್ಟಿ ಮತ್ತಿತರರು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಅಕ್ಕನ ಅಮರವಾಣಿ ಭಾಗ-26



320. ಜ[illegible]ವೆ ಪ್ರಾಣ

ಎಲ್ಲರ ಪ್ರಾಣವಂಗೈಯಲ್ಲಿದೆ;
ಎನ್ನ ಪ್ರಾಣ ಜಂಗಮದಲ್ಲಿದೆ.
ಎಲ್ಲರ ಆಯುಷ್ಯ ಶಿರದಲ್ಲಿ ಬರೆದಿದೆ;
ಎನ್ನ ಆಯುಷ್ಯ ನಿಮ್ಮಲ್ಲಿ ಸಂದಿದೆ.
ಚೆನ್ನಮಲ್ಲಿಕಾರ್ಜುನದೇವರ ದೇವಾ,
ನಿಮ್ಮ ಶರಣರೆನ್ನ ಪ್ರಾಣಲಿಂಗವೆಂದು
ಧರಿಸಿದೆನು.

ಬಹುಜನ ಧರ್ಮಾನುಯಾಯಿಗಳು ಆಸಕ್ತಿ ಇಷ್ಟಲಿಂಗ ಪೂಜೆಯಲ್ಲಿದೆ; ಅಕ್ಕನವರ ಆಸಕ್ತಿ ಜಂಗಮಸೇವೆಯಲ್ಲಿದೆ. ಎಲ್ಲರ ಆಯುಷ್ಯ ವಿಧಿಯ ಕೈಯಲ್ಲಿದ್ದು ಶಿರದಲ್ಲಿ ಬರೆಯಲ್ಪಟ್ಟಿದೆ. ಅಕ್ಕನವರು ಲಿಂಗದೇವರಲ್ಲಿ ಸರ್ವಾರ್ಪಣ ಮನೋಭಾವ ಹೊಂದಿರುವುದರಿಂದ ದೇವನ ಇಚ್ಚೆಗೆ ಒಳಪಟ್ಟಿದೆ. ದೇವಾ, ನಿಮ್ಮ ಶರಣರು ಎನ್ನ

ಪ್ರಾಣವಾಗಿದ್ದಾರೆ ಎಂದು ಅಕ್ಕನವರು ಹೇಳುತ್ತಾರೆ.

321. ಜೀವನದ ಸಾರ್ಥಕತೆ

ಪಡೆವುದರಿದು ನರಜನ್ಮವ,
ಪಡೆವುದರಿದು ಹರಭಕ್ತಿಯ,
ಪಡೆವುದರಿದು ಗುರುಕಾರುಣ್ಯವ,
ಪಡೆವುದರಿದು ಲಿಂಗ ಜಂಗಮ ಸೇವೆಯ
ಪಡೆವುದರಿದು ಸತ್ಯಶರಣರ ಅನುಭಾವವ.
ಇಂತಾಗಿ ಚೆನ್ನಮಲ್ಲಿಕಾರ್ಜುನದೇವರ
ದೇವಯ್ಯನ
ಶರಣರ ಅನುಭಾವದಲ್ಲಿ
ನಲಿನಲಿದಾಡು ಕಂಡೆಯಾ ಎಲೆಮನವೆ.

"ಮುಂದಿನ ಜನ್ಮವೇನಾದರೂ ಇದ್ದರೆ ದೇವರಲ್ಲಿ ನರಜನ್ಮವನ್ನು ಕೊಡು ಎಂದು ಬೇಡಿಕೊಳ್ಳಬೇಕು. ಏಕೆಂದರೆ 84ಲಕ್ಷ ಜನ್ಮಗಳು ಈ ಜೀವನಕ್ಕೆ ಇದೆಯೆಂದು ನಂಬಲಾಗುತ್ತಿದೆ, ಇವುಗಳಲ್ಲಿ ಮಾನವ ಜನ್ಮವೇ ಎಲ್ಲಕ್ಕೂ ಶ್ರೇಷ್ಠ ಮನುಷ್ಯನು ಸೃಷ್ಟಿಯ ಕಿರೀಟದಂತೆ ಇದ್ದಾನೆ. ವಿಕಾಸ ತತ್ವದ ತುಟ್ಟ ತುದಿಯಲ್ಲಿದ್ದಾನೆ. ಜಡ, ಸಸ್ಯ, ಪ್ರಾಣಿಗಳ ವರ್ಗದಲ್ಲಿ ಎಲ್ಲಕ್ಕೂ ಮೇಲಿದ್ದಾನೆ. ಏಕೆಂದರೆ ಮಾನವನಲ್ಲಿ ವಿವೇಚನಾ ಶಕ್ತಿ ಇದೆ; ಭೂತ-ಭವಿಷ್ಯತ್ತು ಕುರಿತು ಆಲೋಚಿಸುವ ಶಕ್ತಿ ಇದೆ.

ನರಜನ್ಮನವನ್ನಷ್ಟೇ ಪಡೆದರೆ ಸಾಲದು ದೇವರಲ್ಲಿ ಶ್ರದ್ಧೆ ಹೊಂದುವ ಮನೋಭಾವ ಇರಬೇಕು. ಜೀವನದ ಏರಿಳಿತಗಳಲ್ಲಿ ದೇವಶ್ರದ್ಧೆ ಜೀವನದ ಹಡಗು ಮುಳುಗದಂತೆ ಆಸರೆ ಒದಗಿಸುವುದು. ಕೇವಲ ದೇವಶ್ರದ್ಧೆ ಇದ್ದರೆ ಸಾಲದು ದೀಕ್ಷಾನುಗ್ರಹವನ್ನು ಹೊಂದುವ ಮನೋಭಾವ ಬರಬೇಕು. ದೀಕ್ಷೆ ಇಲ್ಲದೆ ಮೋಕ್ಷವಿಲ್ಲ. ದೇವರ ಪ್ರತಿನಿಧಿಯಾದ ಗುರುವಿನಿಂದ ಮಂತ್ರೋಪದೇಶ, ಕಾರುಣ್ಯವನ್ನು ಪಡೆಯಬೇಕು. ಗುರುಬೋಧೆ ಪಡೆದು ಇಷ್ಟಲಿಂಗಪೂಜೆ ಮಾಡುತ್ತ ಸಂತೃಪ್ತನಾಗಿದ್ದರೆ ಸಾಲದು ನಿರಾಕಾರನಾದ ಲಿಂಗದೇವನ ಸೇವೆಯನ್ನು ಜಂಗಮ ಸೇವೆಯ ಮೂಲಕ ಪೂರೈಸಬೇಕು. ಏಕೆಂದರೆ ನಿರಾಕಾರ ಲಿಂಗದ ಮುಖವೇ ಜಂಗಮ. ಕೇವಲ ಲಿಂಗಪೂಜೆ-ಜಂಗಮ ದಾಸೋಹದಲ್ಲಿ ತಲ್ಲೀನನಾದರೆ ಸಾಲದು ಸತ್ಯ ಶರಣರೊಡನೆ ಅನುಭವಗೋಷ್ಠಿ ಮಾಡಬೇಕು. ಆಧ್ಯಾತ್ಮಿಕ ಪ್ರವೃತ್ತಿಯ ರಕ್ಷಣೆಗೆ ಶರಣರ ಸಂಗ ಬಹುಮುಖ್ಯ. ಎಳೆಯ ಸಸಿಗಳನ್ನು ನೆಟ್ಟಾಗ ಅವನ್ನು ಕಾಪಾಡಲು ಒಣಗಿದ ಗರಿಗಳನ್ನು ಕಟ್ಟುವಂತೆ ಶರಣರ ಸಂಗ. ಆದ್ದರಿಂದ ಎಲೆ ಮನಸ್ಸೇ ಶರಣರೊಡನೆ ಅನುಭಾವ ಮಾಡಿ ನಲಿದಾಡು." ಎಂದು ಅಕ್ಕನವರು ತಮ್ಮ ಮನಸ್ಸಿಗೆ ಹೇಳುತ್ತಾ ಹಂತ ಹಂತವಾಗಿ ಜೀವನದ ಸಾರ್ಥಕತೆ ಯಾವುದರಲ್ಲಿದೆ ಎಂಬುದನ್ನು ಬಿಂಬಿಸುವರು.

322. ಆದಿ ಅನಾದಿ ಅರಿವು

ಆದಿ ಅನಾದಿ ನಿತ್ಯಾನಿತ್ಯವ
ತಿಳಿಯಲರಿಯದೆ
ವಾಯಕ್ಕೆ ಪರಬ್ರಹ್ಮವ ನುಡಿವ
ವಾಯುಪ್ರಾಣಿಗಳವರೆತ್ತ ಬಲ್ಲರೋ,
ಆ ಪರಬ್ರಹ್ಮದ ನಿಜದ ನಿಲವ ಅದೆಂತೆಂದಡೆ:
ಆದಿಯೆ ದೇಹ ಅನಾದಿಯೆ ನಿರ್ದೇಹ,
ಆದಿಯೆ ಸಕಲ, ಅನಾದಿಯೆ ನಿಷ್ಕಲ,
ಆದಿಯೆ ಜಡ, ಅನಾದಿಯೆ ಅಜಡ,
ಆದಿಯೆ ಕಾಯ, ಅನಾದಿಯೆ ಪ್ರಾಣ,
ಈ ಎರಡರ ಯೋಗವ ಭೇದಿಸಿ
ತನ್ನಿಂದ ತಾನೇ ತಿಳಿದು ನೋಡಲು
ಆದಿ ಸಂಭಂದವಪ್ಪ ಭೂತಂಗಳು ನಾನಲ್ಲ.
ದಶವಿಧೇಂದ್ರಿಯಂಗಳು ನಾನಲ್ಲ.
ದಶವಾಯುಗಳು ನಾನಲ್ಲ.
ಅಷ್ಟಮದಂಗಳು, ಸಪ್ತವ್ಯಸನಂಗಳು,
ಅರಿಷಡ್ವರ್ಗಂಗಳು, ಷಡೂರ್ಮಿಗಳು
ಷಡ್ಭ್ರಮೆಗಳು
ಷಡ್ಭಾವವಿಕಾಂಗಳು, ಷಟ್ಕರ್ಮಂಗಳು,
ಷಡ್ಧಾತುಗಳು
ತನುತ್ರಯಂಗಳು, ಜೀವತ್ರಯಂಗಳು,
ಮಲತ್ರಯಂಗಳು ಮನತ್ರಯಂಗಳು,
ಗುಣತ್ರಯಂಗಳು, ಭಾವತ್ರಯಂಗಳು,
ತಾಪತ್ರಯಂಗಳು, ಅಂತಃಕರಣಂಗಳು
ಇಂತಿವಾದಿಯಾಗಿ ತೋರುವ ತೋರುವ
ತೋರಿಕೆಯೇನೂ
ನಾನಲ್ಲ ನನ್ನವಲ್ಲ.
ಇಂತಿವೆಲ್ಲವು ನನ್ನಾಧೀನವಾಗಿಪ್ಪವು;
ನಾನಿವರಾಧೀನವಲ್ಲ.

ನಾನು ತೂರ್ಯ ತೂರ್ಯಾತೀತವಪ್ಪ
ಸತ್ತು ಚಿತ್ತಾನಂದ ನಿತ್ಯನಿಜಪರಿಪೂರ್ಣವಸ್ತುವೆ
ತನ್ನಿರವೆಂದು ತಿಳಿಯೆ,
ಆ ತಿಳಿದ ಮಾತ್ರದಲ್ಲಿಯೇ ಅನಿತ್ಯದ ಬೆಸುಗೆ
ಬಿಟ್ಟು ನಿರಾಳದಲ್ಲಿ ನಿಜವನ್ನೈದಲರಿಯದೆ
ಮತ್ತೆಯುಂ ಭೌತಿಕ ತತ್ವಸಂಬಂಧಿಯಾಗಿ
ಇರುತ್ತಿರಲು, ಇಂತೀ ತತ್ವದಾದಿ ತಾನೆಂತೆನಲು:
ಆ ಪರಬ್ರಹ್ಮವಪ್ಪ ನಿತ್ಯನಿರಾಳ ನಿಃಶೂನ್ಯಲಿಂಗವೆ
ತನ್ನ ಲೀಲಾವಿಲಾಸದಿಂದ ತಾನೆ ಸುನಾದ
ಬಿಂದು ಪ್ರಕಾಶತೇಜೋಮೂರ್ತಿಯಾಗಿ ನಿಂದು
ಮಹಾಲಿಂಗವೆಂದೆನಿಸಿತ್ತು.
ಆ ಮಹಾಲಿಂಗವೆ ಪಂಚಸಾದಾಖ್ಯವೆಂದೆನಿಸಿತ್ತು.
ಆ ಪಂಚಸಾದಖ್ಯವೆ ಪಂಚಲಿಂಗ
ಪ್ರಕಾಶವೆಂದೆನಿಸಿತ್ತು. ಆ ಪಂಚಲಿಂಗ
ಪ್ರಕಾಶವೆ ಪಂಚಮುಖವೆಂದೆನಿಸಿತ್ತು. ಆ
ಪಂಚಮುಖದಿಂದವೆ ಪಂಚಾಕ್ಷರಿಯುತ್ಪತ್ತಿ.
ಆ ಪಂಚಾಕ್ಷರಿಯಿಂದವೆ ಪಂಚಕಲೆಗಳುತ್ಪತ್ತಿ.
ಆ ಪಂಚಶಕ್ತಿಗಳಿಂದವೆ ಜ್ಞಾನ ಮನ ಬುದ್ಧಿ ಚಿತ್ತ
ಅಹಂಕಾರಗಳುತ್ಪತ್ತಿ. ಆ ಜ್ಞಾನ ಮನ ಬುದ್ಧಿ ಚಿತ್ತ
ಅಹಂಕಾರಗಳಿಂದವೆ ಪಂಚತನ್ಮಾತ್ರಂಗಳುತ್ಪತ್ತಿ.
ಆ ಪಂಚತನ್ಮಾತ್ರಂಗಳಿಂದವೆ
ಪಂಚಭೂತಂಗಳುತ್ಪತ್ತಿ. ಆ ಪಂಚಭೂತಂಗಳೇ
ಪಂಚೀಕರಣವನೆಯ್ದಿ ಆತ್ಮಂಗೆ ಅಂಗವಾಯಿತ್ತು.
ಆ ಅಂಗಕ್ಕೆ ಜ್ಞಾನೇಂದ್ರಿಯಂಗಳು
ಕರ್ಮೇಂದ್ರಿಯಂಗಳು ಪ್ರತ್ಯಂಗವೆಂದೆನಿಸಿತ್ತು.
ಇಂತು ದೇಹ ಸಂಬಂಧಮಂ ಶಿವ ತನ್ನ
ಚಿದಂಶಿಕನಪ್ಪ ಆತ್ಮಂಗೆ ಸಂಬಂಧಿಸಿದನಾಗಿ,
ಆ ಸಂಬಂಧಿಸಿದ ಕಾಯವ ಪೂರ್ವಾಶ್ರಯವು
ಎಲ್ಲಿಯಾಯಿತ್ತು ಅಲ್ಲಿಯೇ ಅಡಗಿಸಿ ಆ
ಕಾಯದ ಪೂರ್ವಾಶ್ರಯವನಳಿದು
ಮಹಾಘನಲಿಂಗವ ವೇಧಿಸಿ ಕೊಟ್ಟು,
ಶಿವ ತಾನೆ ಗುರುವಾಗಿ ಬಂದು ಮಹಾಘನ
ಲಿಂಗವ ವೇಧಿಸಿ ಕೊಟ್ಟ ಪರಿ ಎಂತೆಂದಡೆ:
ಆತ್ಮಗೂಡಿ ಪಂಚಭೂತಂಗಳನೆ ಷಡ್ವಿಧ
ಅಂಗವೆಂದೆನಿಸಿ, ಆ ಅಂಗಕ್ಕೆ ಆ ಕಲೆಗಳನೆ
ಷಡ್ವಿಧ ಶಕ್ತಿಗಳೆಂದೆನಿಸಿ, ಆ ಶಕ್ತಿಗಳಿಗೆ
ಷಡ್ವಿಧ ಭಕ್ತಿಯನಳವಡಿಸಿ, ಆ ಭಕ್ತಿಗಳಿಗೆ
ಭಾವಜ್ಞಾನ ಮನ ಬುದ್ಧಿ ಚಿತ್ತ ಅಹಂಕಾರಗಳನೆ
ಷಡ್ವಿಧ ಹಸ್ತಂಗಳೆಂದೆನಿಸಿ, ಆ ಹಸ್ತಂಗಳಿಗೆ
ಮಹಾಲಿಂಗವಾದಿಯಾದ ಪಂಚಲಿಂಗಗಳನೆ
ಷಡ್ವಿಧ ಲಿಂಗಗಳೆಂದೆನಿಸಿ, ಆ ಮುಖಂಗಳಿಗೆ
ತನ್ಮಾತ್ರಂಗಳನೆ ದ್ರವ್ಯಪದಾರ್ಥಂಗಳೆಂದೆನಿಸಿ,
ಆ ದ್ರವ್ಯ ಪದಾರ್ಥಂಗಳು ಆಯಾಯ
ಮುಖದ ಲಿಂಗಗಳಲ್ಲಿ, ನಿರಂತರ
ಸಾವಧಾನದಿಂದ ಅರ್ಪಿತವಾಗಿ
ಬೀಗಲೊಡನೆ. ಅಂಗಸ್ಥಲಂಗಳಡಗಿ ತ್ರಿವಿಧ
ಲಿಂಗಾಂಗಸ್ಥಲಂಗಳುಳಿದು ಕಾಯಗುರು,
ಪ್ರಾಣಲಿಂಗ, ಜ್ಞಾನಜಂಗಮ. ಗುರುವಿನಲ್ಲಿ
ಶುದ್ಧಪ್ರಸಾದ ಲಿಂಗದಲ್ಲಿ ಸಿದ್ಧಪ್ರಸಾದ,
ಜಂಗಮದಲ್ಲಿ ಪ್ರಸಿದ್ಧಪ್ರಸಾದ. ಇಂತೀ ತ್ರಿವಿಧ
ಪ್ರಸಾದವು ಏಕಾರ್ಥವಾಗಿ, ಮಹಾಘನ
ಪರಿಪೂರ್ಣಪ್ರಸಾದವಳವಟ್ಟ ಶರಣ
ಜ್ಞಾನಿಯಲ್ಲ, ಅಜ್ಞಾನಿ ಮುನ್ನವೆ ಅಲ್ಲ.
ಶೂನ್ಯವಲ್ಲ, ನಿಃಶೂನ್ಯ ಮುನ್ನವೆ ಅಲ್ಲ.
ದ್ವೈತಿ ಅಲ್ಲ, ಅದ್ವೈತಿ ಮುನ್ನವೆ ಅಲ್ಲ.
ಇಂತೀ ಉಭಯಾತ್ಮಾಕ ತಾನೇ ಆಗಿ!
ಇದು ಕಾರಣ, ಇದರ ಆಗು-ಹೋಗು
ಸಕಲಸಂಬಂಧವ ಚೆನ್ನಮಲ್ಲಿಕಾರ್ಜುನದೇವರ
ದೇವಯ್ಯಾ ನಿಮ್ಮ ಶರಣರು ಬಲ್ಲರು.

ಈ ಜಗತ್ತಿನಲ್ಲಿ ಆದಿ-ಅನಾದಿ, ನಿತ್ಯ-ಅನಿತ್ಯ ಎಂಬ ಎರಡು ದ್ವಂದ್ವಗಳಿವೆ. ಇವುಗಳನ್ನು ತಿಳಿಯದೆ ಪಾರಮಾರ್ಥದ ಬಗ್ಗೆ ಮಾತನಾಡುವುದು ಹೊಟ್ಟೆಪಾಡಿಗಾಗಿ ಅಂದರೆ ಕೇವಲ ಜೀವಿಸುವುದಕ್ಕಾಗಿ ಮಾತನಾಡಿದಂತೆ. ಆದಿಯೂ, ಅನಿತ್ಯವೂ ಆದ ಈ ಜಗತ್ತಿನ ಹಿಂದೆ ಅನಾದಿಯೂ, ನಿತ್ಯವೂ ಆದ ಚೈತನ್ಯವು ತುಂಬಿದೆ. ಅದನ್ನು ತಿಳಿದುಕೊಳ್ಳುವುದೇ ಜೀವನದ ಮರ್ಮ.

ದೇಹವನ್ನು ತೆಗೆದುಕೊಂಡರೆ ದೇಹಕ್ಕೆ ಆದಿ ಇದೆ. ಇದರಲ್ಲಿ ಇರುವ ಆತ್ಮವು ಅನಾದಿ. ದೇಹದ ಹುಟ್ಟಿನೊಡನೆ ಆತ್ಮವು ಹುಟ್ಟುವುದಿಲ್ಲ. ದೇಹದ ಸಾವಿನೊಡನೆ ಆತ್ಮವು ಸಾಯುವುದಿಲ್ಲ. ದೇಹ ಅಂತ್ಯವಾದ ಮೇಲೆ ಈಗಿನ ಜನ್ಮದ ಕರ್ಮಕ್ಕೆ ಅನುಗುಣವಾಗಿ ಆತ್ಮವು ಇನ್ನೊಂದು ದೇಹವನ್ನು ಪ್ರವೇಶಿಸುವುದು. ದೇಹವು ತಂದೆ ತಾಯಿಗಳಿಂದ ಬರುತ್ತದೆ, ಆತ್ಮವು ಪರಮಾತ್ಮನಿಂದ ಬರುತ್ತದೆ. ದೇಹವು ಸಾಕಾರ(ಸಕಲ) ಆತ್ಮವು ನಿರಾಕಾರ(ನಿಷ್ಕಲ), ದೇಹವು ಜಡ ಆತ್ಮವು ಚೈತನ್ಯ. ಶರೀರವು ಆದಿಯಾದರೆ ಪ್ರಾಣವು ಅನಾದಿ. (ಅದೇ ರೀತಿ ಬ್ರಹ್ಮಾಂಡವನ್ನು ತೆಗೆದುಕೊಂಡು

ಬ್ರಹ್ಮಾಂಡಕ್ಕೆ ಆದಿ ಇದೆ, ಅದನ್ನು ವ್ಯಾಪಿಸಿರುವ ಪರಮಾತ್ಮ ಅನಾದಿ, ಬ್ರಹ್ಮಾಂಡ ಸಾಕಾರ ರೂಪವನ್ನು ಹೊಂದಿದೆ, ಪರಮಾತ್ಮನು ನಿರಾಕಾರ ಸ್ವರೂಪನು/ ಬ್ರಹ್ಮಾಂಡವು ಜಡ, ಪರಮಾತ್ಮನು ಚೈತನ್ಯ ಸ್ವರೂಪನು. ಶರೀರವು ಪಂಚಭೂತಗಳ ಪಂಚೀಕರಣದಿಂದ ಆದರೆ ಆತ್ಮನು ಪರಮಾತ್ಮನ ಒಂದು ಅಂಶವಾಗಿರುವುದು.)

ಹೀಗೆ ದೇಹ-ಆತ್ಮಗಳು ಸಂಯೋಗವನ್ನು ತನ್ನಿಂದ ತಾನೇ ಆತ್ಮಜ್ಞಾನದಿಂದ ತಿಳಿದು ನೋಡಲು ಒಂದು ಪರಮಸತ್ಯವು ಗೋಚರವಾಗುವುದು. ಅದೇನೆಂದರೆ, ದೇಹದಲ್ಲಿರುವ ಆತ್ಮವೇ 'ನಾನು'ಎಂಬ ಪರಮ ಸತ್ಯ. ದೇಹಕ್ಕೆ ಮೂಲಕಾರವಾದ ಪಂಚಭೂತಗಳಾದ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಎಂಬುವು ನಾನಲ್ಲ.

ಪಂಚ ಜ್ಞಾನೇಂದ್ರಿಯಗಳಾದ ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ ಮತ್ತು ಪಂಚ ಕಮೇಂದ್ರಿಯಗಳಾದ ವಾಕ್ಕು, ಕೈ, ಕಾಲು, ಗುದ, ಗುಹ್ಯ ಈ ಹತ್ತು ಇಂದ್ರಿಯಗಳು ನಾನಲ್ಲ. ದಶವಾಯುಗಳಾದ ಪ್ರಾಣ, ಅಪಾನ, ವ್ಯಾನ, ಸಮಾನ, ಉದಾನ(ಮುಖ್ಯ ಪ್ರಾಣಗಳು) ಮತ್ತು ಉಪಪ್ರಾಣಗಳಾದ ನಾಗ, ಕೂರ್ಮ, ಕೃಕರ, ದೇವದತ್ತ ಧನಂಜನ ಮುಂತಾದವು ನಾನಲ್ಲ; ಅಷ್ಟಮದಗಳಾದ ನಾಗ, ಕುಲ,ಛಲ, ಧನ, ರೂಪ, ಯೌವನ, ವಿದ್ಯೆ, ರಾಜ್ಯ, ತಪ ನಾನಲ್ಲ.


ಸಪ್ತ ವ್ಯಸನಗಳಾದ ತನುವ್ಯಸನ, ಮನ ವ್ಯಸನ, ಧನ ವ್ಯಸನ, ರಾಜ್ಯ ವ್ಯಸನ, ಉತ್ಸಾಹ ವ್ಯಸನ, ಸೇವಕ ವ್ಯಸನ, ವಿಶ್ವ ವ್ಯಸನ ಎಂಬುವು ನಾನಲ್ಲ [ಸಪ್ತ ವ್ಯಸನಗಳಲ್ಲಿ ಬರುವ ಇನ್ನೊಂದು ಪಟ್ಟಿ ಎಂದರೆ ಬೇಟೆ, ಜೂಜು, ಹಗಲು ನಿದ್ರೆ, ಪರನಿಂದೆ, ಸ್ತ್ರೀ ಲಾಲಸೆ, ಮದ್ಯಪಾನ, ನೃತ್ಯಗಾನವಾದ ನಾಭಿರುಚಿ]. ಇಲ್ಲಿ ವ್ಯಸನ ಎಂದರೆ ಚಟ ಎಂಬರ್ಥದಲ್ಲಿ ಬಳಲಾಗಿದೆ] ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ನಾನಲ್ಲ; ಷಡೂರ್ಮಿಗಳಾದ ಹಸಿವು, ತೃಷೆ, ನಿದ್ರೆ, ವಿಷಯ, ಮೈಥುನ ಬಯಕೆ ಎಂಬುವು ನಾನಲ್ಲ.

ಧರ್ಮಸ್ಥಳದ ಶಾಂತಿವನದಲ್ಲಿ
ಕೆಲವೊಂದು ದಿನ

ಬಾತ್(ಬೆಣಚುಕಲ್ಲಿನ ಬಿಸಿಕೋಣೆಯಲ್ಲಿ ಸ್ನಾನ), ಸ್ಪೈನಲ್ ಬಾತ್(ಬೆನ್ನು ಹುರಿ ಸ್ನಾನ), ಡುಷ್(ಒಂದು ಕೋಣೆಯಲ್ಲಿ ನಿಲ್ಲಿಸಿ ಜೋರಾಗಿ ಬಿಸಿ ನೀರನ್ನು ಪೈಪ್ ಮೂಲಕ ಬಿಡುವುದು) ಹೀಗೆ ದಿನಾಲು ಒಂದೊಂದು ಸ್ನಾನ ಮಾಡಿಸಿ ನಂತರ ಅಂಗೈ ಅಗಲದ ಮೂರು ಚಪಾತಿ, ಕುದಿಸಿದ ಉಪ್ಪು, ಹುಳಿ, ಕಾರ ಏನೂ ಇರದ ತರಕಾರಿ ಕೊಡುವರು. ಚಿಕಿತ್ಸೆಯ ನಂತರ ಸಿಕ್ಕಾಪಟ್ಟೆ ಹಸಿವಾಗಿರುತ್ತದೆ, ಮೂರು ಸಣ್ಣ ಚಪಾತಿ ಯಾತಕ್ಕೂ ಸಾಕಾಗದು. ಆದರೆ ತಾಳಿಕೊಳ್ಳಬೇಕು. ಚಪಾತಿ ಪಲ್ಯದೊಡನೆ ಮಜ್ಜಿಗೆಯನ್ನು ಹಾಗೂ ಅದರಲ್ಲಿ ಕಲಸಿಕೊಳ್ಳಲು ಮೆಂತ್ಯೆ ಪುಡಿಯನ್ನು ಕೊಡುವರು. ಮಧ್ಯೆಮಧ್ಯೆ ಕಲ್ಲಂಗಡಿ ಹಣ್ಣನ್ನು ಹೆಚ್ಚಿಕೊಡುತ್ತಿದ್ದರು. ಸಕ್ಕರೆ ಕಾಯಿಲೆ ಇದೆ ಬೇಡ ಎಂದಾಗ ಅದರ ಬದಲು ಪಪ್ಪಾಯಿ ಕೊಡಲು ಆರಂಭಿಸಿದರು. ಬೆಳಗಿನ ಉಪಾಹಾರವನ್ನು ಹನ್ನೊಂದು ಗಂಟೆಗೆ ಕೊಟ್ಟ ಬಳಿಕ ಲಘು ವಿಶ್ರಾಂತಿಗೆ ಹೇಳುತ್ತಿದ್ದರು. ನಂತರ ವೈದ್ಯರು ಬಂದು ವಿವರ ಪಡೆಯುತ್ತಿದ್ದರು. ಬಿ.ಪಿ. ತಪಾಸಿಸುತ್ತಿದ್ದರು. ನಾನು ದಿನಾಲು ಮುಂಜಾನೆ ರಕ್ತ ಸಕ್ಕರೆ ಪರೀಕ್ಷೆ ಮಾಡಿಕೊಂಡು ವೈದ್ಯರಿಗೆ ತಿಳಿಸುತ್ತಿದ್ದೆನು. ಮತ್ತೆ ಮಣ್ಣಿನ ಪಟ್ಟಿಯನ್ನು ಹೊಟ್ಟೆ ಮತ್ತು ಕಣ್ಣಿಗೆ ಹಾಕುತ್ತಿದ್ದರು. ಮಂಡಿ ನೋವು ಇರುವವರಿಗೆ ಒಂದು ಪಟ್ಟಿಯನ್ನು ಮಂಡಿಗೆ ಹಾಕಿ ಕರೆಂಟ್ ಹಾಯಿಸುವರು. ಪ್ರಕೃತಿ ಚಿಕಿತ್ಸೆ ಎಂದರೆ ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ ತತ್ತ್ವಗಳಿಂದ ಮಾತ್ರ ಚಿಕಿತ್ಸೆ ಮಾಡುವುದು; ಯಾವುದೇ ಔಷಧಿಗಳನ್ನು ಉಪಯೋಗಿಸದೆ ಇರುವುದು. ನಾವು ಈಗಾಗಲೇ ತೆಗೆದುಕೊಳ್ಳುತ್ತಿರುವ ಔಷಧಿಗಳನ್ನು ಬಿಡಿಸಲು ಹೋಗುವುದಿಲ್ಲ; ಕಡಿಮೆ ಮಾಡಲು ಯತ್ನಿಸುವರು.

ಮಾತೆ ನಿಮಗೆ ಶರಣೆಂಬೆ?









ಗುರು ಮಾತೆ ಮಾತಾಜಿ ನಾನಿನಗೆ ಶರಣೆಂಬೆ
ಮಹಾಯೋಗಿಣಿ ಶರಣ ಮೇಳವ ರೂವಾರಿಗೆ ॥
ಜ್ಞಾನ ಗುರುವ ಪಡೆದು ದಿವ್ಯಯೋಗಿಣಿಯಾದೆ
ಭವಿಗಳ ಸಂಗವಂ ತೊರೆದು ಭಕ್ತಿ ಸಂಗವ ನೀ ಪಡೆದೆ ॥

ಗುರು ಲಿಂಗಾನಂದರ ಪ್ರವಚನವಂ ಕೇಳಿ ನೀನು
ವೈರಾಗ್ಯ ಭಾವ ತಾಳಿ ಬಂದೆ ನೀ ಗುರವಿನೆಡೆಗೆ
ಗುರವಿನ ಕರುಣೆಯಂ ಪಡೆದು ಲಿಂಗದೀಕ್ಷೆಯನು
ಮರಳಿ ಮನೆಗೆ ಬಂದು ಸಾಧನೆಗೈದು ಸಾಗಿದೆ ಮನೆಬಿಟ್ಟು ॥
ತನುವ ಮೀಸಲಿಟ್ಟೆ ಸಮಾಜ ಸೇವೆಗಾಗಿ

ಮನವ ಮೀಸಲಿಟ್ಟೆ ಧರ್ಮ ಚಿಂತನೆಗಾಗಿ
ಜ್ಞಾನವ ಮೀಸಲಿಟ್ಟೆ ಶರಣ ತತ್ತ್ವ ಸಾರಲು
ಮಾತಿನಸಿಯಿಂ ಬಂದ ಎಡರು ತೊಡರುಗಳ ಮೆಟ್ಟಿದೆ ॥

ದೇವನೊಲಿಮೆ ಪಡೆದಿರಿ ತನು ಮನ ಧನವನರ್ಪಿಸಿ
ಜನಮನ ಪ್ರೀತಿ ಗಳಿಸಿದಿರಿ ಬಸವ ತತ್ತ್ವಸಾರಿ
ಪ್ರವಚನ ಯೋಗಿಯಾಗಿ ಗುರುವ ಮೀರಿಸಿದಿರಿ
ಹೋದ ಹೋದಲ್ಲಿ ಬಸವ ತತ್ತ್ವ ಗಟ್ಟಿಗೊಳಿಸಿ ಬಂದಿರಿ ॥

ವಚನ ದೀಪ್ತಿಗೆ ಸ್ವಾನುಭಾವದಿಂ ವ್ಯಾಖ್ಯಾನ ಬರೆದೆ
ಅಭಿನವ ಅಕ್ಕಮಹಾದೇವಿ ನೀನಾಗಿ ಬೆಳಗಿದೆ
ಭವಿಗಳ ಭವರೋಗ ಕಳೆವ ಭವರೋಗ ವೈದ್ಯೆನೀನಾದೆ
ವಚನಾನಂದವ ಪಡೆದು ವಚನ ಸಿರಿಯ ಜಗದಿ ಮೆರೆದೆ ॥

ವಚನೋಕ್ತಿಯ ಭಾವವ ಬಯಲು ಮಾಡಿದ ಮಾತೆ
ವಚನದರಮನೆಯಲ್ಲಿ ಲೀಲಾವರೇಷ ಲಿಂಗದೇವನ ಕಂಡೆ
ವಾಕ್‌ಚಾತುರ್ಯದಿಂದ ಸರ್ವರ ಮನವ ಗೆದ್ದೆ
ನೂರಾರು ಗ್ರಂಥಗಳ ರಚನೆ ಮಾಡಿ ಜ್ಞಾನ ಪ್ರಸಾರಗೈದೆ ॥

ಶರಣರು ತೊರೆದು ಹೋದ ಕಲ್ಯಾಣಕೆ ಮತ್ತೆ ಕರೆದೆ
ನೂರೆಂಟಡಿ ಬಸವನ ಮೂರುತಿ ನಿಲಿಸಿ ಕಲ್ಯಾಣದಿ
ಕಲ್ಯಾಣ ಪರ್ವವ ಮಾಡಿ ಕಲ್ಯಾಣ ಮತ್ತೆ ನಲಿವಂತೆ ಮಾಡಿ
ಸೂರ್ಯಚಂದ್ರರಿರುವನ ನಡೆಯುವುದೀ ಪರ್ವವೆಂದೆ ॥

* ಲೇಖಕರು: ಮಾತೆ ಜ್ಞಾನೇಶ್ವರಿ, ಬೆಂಗಳೂರು



ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ

ಅಂತರಂಗ ಬಹಿರಂಗ

ಜೀವನ ಪ್ರಸಾದೀಕರಣವಾಗಲಿ

ಜಗತ್ತಿನ ಮಾನವರಲ್ಲಿ ಎರಡು ಪ್ರಕಾರವಾಗಿ ವಿಂಗಡಿಸಬಹುದು. ಆಸ್ತಿಕರು ಮತ್ತು ನಾಸ್ತಿಕರು. ಆಸ್ತಿಕ ಎಂದರೆ ಈ ಜಗತ್ತನ್ನು ನಿರ್ಮಿಸಿದ ಜಗದೊಡೆಯ ಪರಮಾತ್ಮನೊಬ್ಬ ಇದ್ದಾನೆ. ಅವನೇ ಪರಮೋನ್ನತ ಶಕ್ತಿ ಎಂದು ನಂಬಿ ಶರಣಾಗತನಾಗಿ ಧರ್ಮಮಾರ್ಗದಲ್ಲಿ ನಡೆಯುವವರು. ನಾಸ್ತಿಕ ಎಂದರೆ ಪಾಪ-ಪುಣ್ಯ, ದೇವರು-ಧರ್ಮ ಯಾವುದರಲ್ಲೂ ನಂಬಿಕೆಯಿಲ್ಲದೆ, ಕೇವಲ ಭೌತಿಕ ಜಗತ್ತು, ಶಾರೀರಿಕ ಸುಖವನ್ನೇ ಆತ್ಯಂತಿಕ ಸುಖವೆಂದು ನಂಬಿದವರು.

ವೃಕ್ಷದ ಒಂದು ಎಲೆ ಅಲ್ಲಾಡಬೇಕಾದರೂ ಪರಮಾತ್ಮನ ಅಪ್ಪಣೆಯಿಲ್ಲದೆ ಸಾಧ್ಯವಿಲ್ಲ ಎಂದು ನಮ್ಮ ಧರ್ಮಶಾಸ್ತ್ರಗಳು ಹೇಳುತ್ತವೆ.

ದೇವರು ಇದ್ದಾನೆಂದು ಹೇಳಿದರೂ ದೇವರಿದ್ದಾನೆ. ಸ್ವಾರ್ಥಿಯಾದ ಮಾನವನು ದೇವರು ಇಲ್ಲ ಎಂದು ವಾದಿಸಿದರೂ ದೇವರಿದ್ದಾನೆ, ಇದ್ದಾನೆ ಎಂದು ಹೇಳಬೇಕಾದರೂ ನಾಲಿಗೆ ಬೇಕು. ದೇವರಿಲ್ಲ ಎಂದು ಹೇಳಬೇಕಾದರೂ ನಾಲಿಗೆ ಬೇಕೇ ಬೇಕು. ನಾಲಿಗೆ ಇದೆ ಎಂದರೆ ನಾವಿದ್ದೇವೆ, ನಾವಿದ್ದೇವೆಂದರೆ ದೇವರಿದ್ದಾನೆಂದೇ ಅರ್ಥ.

ತಾನು ಎಲ್ಲದಕ್ಕೂ ಆಧಾರವಾಗಿ ತನಗೊಂದು ಆಧಾರವಿಲ್ಲದ ಶಕ್ತಿಯೇ ದೇವರು. ತಾನು ಎಲ್ಲರಿಗೂ ತಂದೆಯಾಗಿ ತನಗೊಬ್ಬ ತಂದೆ-ತಾಯಿಯಿಲ್ಲದ ಅತ್ಯಂತಿಕ ಶಕ್ತಿಯೇ ದೇವರು. ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿಯೇ ನಂಬುತ್ತೇನೆ ಎಂದರೆ ಸಾಧ್ಯವಾಗದು. ಜಗತ್ತಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯು ತನ್ನ ಹೆಸರಿನ ಮುಂದೆ ತಮ್ಮ ತಂದೆಯ ಹೆಸರನ್ನು ಬರೆದುಕೊಳ್ಳುವರು. ಅವನೇ ನಮ್ಮ ತಂದೆ ಎಂದು ಯಾವ ಆಧಾರದಿಂದ ನಂಬಿದ್ದೇವೆ ? ತಾಯಿಯ ಮಾತನ್ನು ಕೇಳಿ ನಂಬಿದ್ದೇವೆ. ಯಾಕೆಂದರೆ ನಾವು ಹುಟ್ಟುವದಕ್ಕೂ 9 ತಿಂಗಳ ಮೊದಲೇ ಅವನು ತಂದೆಯಾಗಿರುತ್ತಾನೆ. ತಾಯಿಯ ಮೇಲೆ ನಂಬಿಕೆ ಇಟ್ಟು ಅಪ್ಪನನ್ನು ಹೇಗೆ ನಂಬುತ್ತೇವೆಯೋ, ಹಾಗೆಯೇ ಪ್ರವಾದಿಗಳು, ಮಹಾತ್ಮರ ವಾಣಿ ಹಾಗೂ ಧರ್ಮಗ್ರಂಥಗಳ ಆಧಾರದ ಮೇಲೆ ದೇವರಿದ್ದಾನೆಂದು ನಂಬಬೇಕು. ನಮ್ಮ ಬಸವಾದಿ ಶರಣರೆಲ್ಲರೂ ದೇವನನ್ನು ಧೃಢವಾಗಿ ನಂಬಿ ಪೂಜಿಸಿದ್ದಾರೆ.

ಮನುಷ್ಯ ಎಲ್ಲವನ್ನೂ ಪಡೆದುಕೊಳ್ಳುತ್ತಾನೆ; ಮರೆತು ಬಿಡುತ್ತಾನೆ. ಆದರೆ, ದೇವರು ಎಲ್ಲವನ್ನೂ ಕೊಡುತ್ತಾನೆ ಮತ್ತೂ ಕ್ಷಮಿಸುತ್ತಾನೆ (God gives and forgives, man gets and forgets) ಆಹಾರ, ನೀರು, ಗಾಳಿ (ಆಮ್ಲಜನಕ) ಕಾರು, ಮನೆ, ಭೂಮಿ, ಯಾವುದೇ ಆಗಲಿ ಇವೆಲ್ಲ ಆ ಲಿಂಗದೇವನ ಕೊಡುಗೆ ಅಥವಾ ಕರುಣ ಪ್ರಸಾದ ಎಂದು ನಂಬಿ ಶರಣಾಗತಿಯ ಭಾವದಿಂದ ಸ್ವೀಕರಿಸಬೇಕು. ಹಿತಮಿತವಾಗಿ ಸೇವಿಸಬೇಕು. ಕೆಡುವುದಕ್ಕೆ ಅವಕಾಶ ಕೊಡಬಾರದು. ಕೆಡಿಸಬಾರದು. ದೇವನೊಲಿದರೆ ಕೊರಡು ಚಿಗುರುವುದು, ಬರಡು ಆಕಳು ಹಾಲು ಕರೆಯುವುದು, ವಿಷವೂ ಅಮೃತವಾಗಬಲ್ಲದು.

ಹಾಡಿದೊಡೆ ಎನ್ನೊಡೆಯನ ಹಾಡುವೆ, ಬೇಡಿದೊಡೆ ಎನ್ನೊಡೆಯನ ಬೇಡುವೆ ಎಂಬ ನಿಷ್ಠೆಯಿಂದ ದೇವನೊಬ್ಬನೇ ಎಂದು ನಂಬಿ ನಿರಾಕಾರ ದೇವನನ್ನು ಇಷ್ಟಲಿಂಗದ

ರೂಪದಲ್ಲಿ ಪೂಜಿಸಿ ಕೃತಾರ್ಥರಾಗಬೇಕು. ಇದು ಬಸವತತ್ವ. ಹೊಸದಾಗಿ ಕಟ್ಟಿಸಿದ ಮನೆಯಾಗಲಿ, ಖರೀದಿಸಿದ ವಾಹನಗಳಾಗಲಿ, ಬಟ್ಟೆ-ಬರಿಯಾಗಲಿ, ಯಾವುದೇ ವಸ್ತುವಾದರೂ ಮೊದಲಿಗೆ ಗುರು-ಲಿಂಗ-ಜಂಗಮ ಸಾಕ್ಷಿಯಾಗಿ ಶುದ್ಧೀಕರಿಸಿ, ಇವೆಲ್ಲ ದೇವನು ಒಲಿದು ಇತ್ತ ಪ್ರಸಾದ ಎಂದು ಭೋಗಿಸುವುದೇ ಆಚಾರ. ಇದನ್ನೇ ಪ್ರಸಾದೀಕರಣ ಎನ್ನುತ್ತೇವೆ. ಕೇವಲ ವಸ್ತುಗಳನ್ನಷ್ಟೇ ಅಲ್ಲ ಸುಖ-ದುಃಖ, ನೋವು-ನಲಿವು ಇವನ್ನು ಸಹ ದೇವರ ಪ್ರಸಾದ ಎಂದೇ ಭಾವಿಸಬೇಕು. ನಮ್ಮ ಸುಖ-ದುಃಖಗಳ ಬೆಲ್ಲ-ಬೇವುಗಳನ್ನು ಗುರುವಿನ ಪಾದಕ್ಕೆ ಎಡೆಮಾಡಿ ಅರ್ಪಿಸಬೇಕು. ನಮ್ಮ ತನು-ಮನ-ಧನ-ಭಾವ-ಜೀವ ಎಲ್ಲವೂ ಕರ್ತಾರನಿಗೆ ಪ್ರಸಾದವಾಗಬೇಕು. ಅದೇ ನಿಜವಾದ ಮುಕ್ತಿ.

ಭಾವ ಶುದ್ಧಿಯೇ ಮುಕ್ತಿ:

ಮನುಷ್ಯನು ಮೂರು ಶರೀರಗಳನ್ನು ಹೊಂದಿರುತ್ತಾನೆ. ಸ್ಥೂಲ ಶರೀರ ಮಾತ್ರ ಕಣ್ಣಿಗೆ ಕಾಣುತ್ತದೆ. ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಧರ್ಮ ಎಂಬ ಪಂಚ ಜ್ಞಾನೇಂದ್ರಿಯ ಹಾಗೂ ಪಂಚ ಕರ್ಮೇಂದ್ರಿಯಗಳನ್ನು ಹೊಂದಿರುವ, ಕಣ್ಣಿಗೆ ಕಾಣುವ ಈ ಶರೀರವೇ ಸ್ಥೂಲ. ಕಣ್ಣಿಗೆ ಕಾಣದೇ ನಿರಾಕಾರವಾಗಿರುವ ಎಲ್ಲ ಇಂದ್ರಿಯ ಕರಣಗಳ ಚಟುವಟಿಕೆಗೆ ಕಾರಣವಾಗಿರುವ ಮನಸ್ಸೆ ಸೂಕ್ಷ್ಮ ಶರೀರ. ಇದಕ್ಕಿಂತಲೂ ಸೂಕ್ಷ್ಮವಾದ ಶರೀರವೆಂದರೆ ಭಾವ, ಅದಕ್ಕಾಗಿಯೇ ಮಹಾತ್ಮರು, ಶರಣರು ತನು ಶುದ್ಧವಾಗಬೇಕು, ಮನಶುದ್ಧವಾಗಬೇಕು, ಭಾವ ಶುದ್ಧವಾಗಬೇಕು; ಭಾವ ಬರಿದಾಗಬೇಕು, ಭಾವ ಬೆತ್ತಲೆಯಾಗಬೇಕು ಎಂದು ಹೇಳುತ್ತಾರೆ.

ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ಈ ಕಳ್ಳರ ತಂಡಕ್ಕೆ ಮನಸ್ಸು ನಾಯಕನಾಗಿರುತ್ತಾನೆ. ಮನಸ್ಸನ್ನು ನಿಯಂತ್ರಣದಲ್ಲಿಡುವುದಕ್ಕಾಗಿಯೇ ಎಲ್ಲ ಶರಣರು, ಮಹಾತ್ಮರು ದಾರ್ಶನಿಕರು ಉಪದೇಶ, ತತ್ವಸಿದ್ಧಾಂತವನ್ನು ಕೊಟ್ಟಿದ್ದಾರೆ. ವೀರವಿರಾಗಿಣಿ ಅಕ್ಕ ಮಹಾದೇವಿಯವರು ಹೇಳುತ್ತಾರೆ.

ಲೋಕದ ಚೇಷ್ಟೆಗೆ ರವಿಬೀಜವಾದಂತೆ
ಕರಣಗಳ ಚೇಷ್ಟೆಗೆ ಮನವೇ ಬೀಜ,
ಎನಗುಳ್ಳದೊಂದು ಮನ, ಆ ಮನ ನಿಮ್ಮಲ್ಲಿ
ಸಿಲುಕಿದ ಬಳಿಕ ಇನ್ನೆನಗೆ ಭವವುಂಟೆ
ಚನ್ನಮಲ್ಲಿಕಾರ್ಜುನ, ಎಂದು

ಲೋಕದ ಎಲ್ಲ ಚಟುವಟಿಕೆಗಳು ಸೂರ್ಯೋದಯದಿಂದಲೆ ಆರಂಭವಾಗುತ್ತವೆ. ಊರ ಕೋಳಿ ಕೂಗಲಾರಂಭಿಸುತ್ತದೆ. ಕಾಡ ನವಿಲು ವದರಲು ಶುರು ಮಾಡುತ್ತದೆ. ದುಂಬಿಗಳು ಹೂವಿನಿಂದ ಹೂವಿಗೆ ಹಾರಿ ಮಕರಂದವನ್ನು ಹೀರುವುದರಲ್ಲಿ ಮಗ್ನವಾಗುತ್ತವೆ. ರೈತರು ತಮ್ಮ ಕಾಯಕ ಮಾಡಲು ಜಮೀನು-ತೋಟಗಳಿಗೆ ಹೋಗುತ್ತಾರೆ. ಇನ್ನುಳಿದ ಜನರು ತಮ್ಮ ತಮ್ಮ ಕಾಯಕದಲ್ಲಿ ತಾವು ತೊಡಗಿಸಿಕೊಳ್ಳುತ್ತಾರೆ. ಹಾಗೆಯೇ ಇಂದ್ರಿಯಗಳು ಕೂಡ ಕಾರ್ಯಾಚರಣೆ ಮಾಡಬೇಕಾದರೆ ಮನವೇ ಪ್ರೇರಕ ಶಕ್ತಿಯಾಗಿರುತ್ತದೆ. ಆ ಮನವನ್ನೇ ಪರಮಾತ್ಮನ ಧ್ಯಾನದಲ್ಲಿ ಸಿಲುಕಿಸಿದಾಗ ಮತ್ತೆ ನಮಗೆ ಭವವಿಲ್ಲ; ಭಯವಿಲ್ಲ ಎಂದು ಅಕ್ಕಮಹಾದೇವಿಯವರು ಹೇಳುತ್ತಾರೆ.

ಭೌತಿಕವಾದ ನೀರಿನಿಂದ ಮಹಾಮಜ್ಜನ ಮಾಡುವುದರಿಂದ ತಲೆ ಮತ್ತು ಮೈಯನ್ನು ಸ್ವಚ್ಛ ಮಾಡಿಕೊಳ್ಳಬಹುದು. ಮನಶುದ್ಧಿ ಮಾಡಿಕೊಳ್ಳಬೇಕಾದರೆ ಶರಣರ ಸಂಗದಲ್ಲಿದ್ದು ಜ್ಞಾನ ಪಡೆಯಬೇಕು. ದುರ್ವಿಚಾರದ ಭಾವ ಶುದ್ಧಿಯಾಗಬೇಕಾದರೆ, ಸುವಿಚಾರ, ಸತ್‌ಕ್ರಿಯೆ ಅಳವಡಿಸಿಕೊಳ್ಳಬೇಕಾದ್ದು ಅಗತ್ಯವಿದೆ. ಮುಕ್ತಿ ಎಂದರೆ ಬೇರೆ ಏನೂ ಅಲ್ಲ. ಭಾವಶುದ್ಧಿಯಿಂದ ಬೇರೆ ಮುಕ್ತಿಯೇ ಇಲ್ಲ. ಅದಕ್ಕಾಗಿಯೇ ಶರಣರು ಭಾವ ಬರಿದಾಗಬೇಕು. ಭಾವ ಬೆತ್ತಲೆಯಾಗಬೇಕು ಎಂದಿದ್ದಾರೆ. ತನು ಶುದ್ಧಗೊಳಿಸಲು ಸಾಕಷ್ಟು ಮಾರ್ಜಕ ಪಾವಡರ್, ಸಾಬೂನುಗಳಿವೆ. ಜ್ಞಾನ ಸಂಪಾದನೆ ಮಾಡಿಕೊಂಡು ಮನಶುದ್ಧೀಗೂ ಸಾಕಷ್ಟು ಅವಕಾಶಗಳಿವೆ. ಆದರೆ ಸೂಕ್ಷ್ಮಾತಿ ಸೂಕ್ಷ್ಮವಾದ ಭಾವವನ್ನು ಶುದ್ಧಿಗೊಳಿಸುವುದು ಬಲು ಕಷ್ಟದ ಕೆಲಸ.

ಇಷ್ಟಲಿಂಗೋಪಾಸನೆ ವೈಜ್ಞಾನಿಕ ಅರಿವು

ಶ್ರೀ ಬಸವ ಕುಮಾರ ಸ್ವಾಮೀಜಿ



ಮೂಗು: ಇದು ಅದ್ಭುತ ಇಂದ್ರಿಯ. ಎಲ್ಲ ತರಹದ ವಾಸನೆಯನ್ನು ಗ್ರಹಿಸುವ, ಪ್ರಾಣವಾಯುವನ್ನು ಸೇವಿಸಿ ಇಂಗಾಲಾಮ್ಲ ವಾಯುವನ್ನು ಹೊರಹಾಕುವ ಕ್ರಿಯೆಯಿಂದ ಕೂಡಿದ್ದು. ವಾಸನೆಯ ಮೋಹಕ್ಕೆ ಬಲಿಯಾಗಿ ಭೃಂಗ (ಮಕರಂದಕ್ಕೆ) ತನ್ನ ಪ್ರಾಣ ಕಳೆದುಕೊಳ್ಳುವುದು, (ಕಮಲದಲ್ಲಿ ಕುಳಿತು ವಾಸನೆ ಹೀರುತ್ತಾ ಮೈಮರೆತಾಗ ಸೂರ್ಯಾಸ್ತವಾದಾಗ ಕಮಲದಳಗಳು ಮುಚ್ಚಿಕೊಂಡಾಗ ಅದು ನಾಶವಾಗುವುದು) ಅದರಂತೆ ಮನುಷ್ಯನು ವಾಸನೆಗೆ ಸಿಲುಕಿ ತಿನ್ನಬಾರದ ಪದಾರ್ಥಗಳನ್ನು ತಿಂದು, ಹೋಗಬಾರದ ಜಾಗೆಗೆ ಕರೆದು-ಕೊಂಡು ಹೋಗುವುದು. ಇದನ್ನು ನಿಗ್ರಹಿಸುವುದು ಪದಾರ್ಥ ತ್ಯಾಗ.

ನಾಲಿಗೆ:- ಇದೂ ಸಹಿತ ಎರಡು ಕಾರ್ಯಗಳನ್ನು ಮಾಡುತ್ತದೆ. ಒಂದು ರುಚಿಸುವುದು ಇನ್ನೊಂದು ಮಾತನಾಡುವುದು. ಜಾಲಗಾರನು ಹಾಕಿದ ಗಾಳಕ್ಕೆ ಸಿಲುಕಿಸಿದ ಮಳೆಹುಳುವನ್ನು ತಿನ್ನುವುದಕ್ಕಾಗಿ ಬಂದ ಮತ್ಸ್ಯ ಅಥವಾ ಮೀನು ಸಿಕ್ಕು ಸಾಯುವುದು. ಅದೇ ರೀತಿ ಮನುಷ್ಯನು ಸಹ ನಾಲಿಗೆ ರುಚಿಗಾಗಿ ಶರೀರವನ್ನು ಹಾಳು ಮಾಡಿಕೊಳ್ಳುವನು. ಈ

ನಾಲಿಗೆಗೆ ಎಷ್ಟು ತರತರಹದ ಪದಾರ್ಥ, ಪಾನೀಯಗಳಾದರು ಸಾಲುತ್ತಿಲ್ಲ. ಇದನ್ನು ಹತೋಟಿಯಲ್ಲಿಡುವುದೇ ಪದಾರ್ಥತ್ಯಾಗ. ಇನ್ನೊಂದು ಕಾರ್ಯ ಮಾತನಾಡುವುದು.

“ಮಾತು ಮನಾರ ದಗದ ಸುಮಾರ”

ಉಚಿತವಲ್ಲದ, ಕಠೋರವಾದ ನುಡಿಗಳನ್ನು ಹದ್ದ ಬಸ್ತಿಯಲ್ಲಿಡುವುದೇ ಪದಾರ್ಥ ತ್ಯಾಗ.

ಚರ್ಮ:– ಇದು ನಮ್ಮ ಶರೀರದ ತಲೆಯನ್ನು ಹಿಡಿದು ಅಂಗಾಲದ ವರೆಗೆ ವ್ಯಾಪಿಸಿಕೊಂಡಿದೆ. ತಂಪು, ಬಿಸಿ, ಗಾಳಿಯನ್ನು ಗುರ್ತಿಸುವುದು, ಇನ್ನೊಂದು, ಸ್ಪರ್ಶ ಸುಖವನ್ನು ಅನುಭವಿಸುವುದು. ಈ ಇಂದ್ರಿಯ ಸುಖಕ್ಕಾಗಿ ಕಾಡಿನಲ್ಲಿ ಆನೆ ಬಂಧನಕ್ಕೊಳಗಾಗುವುದು. ಹೇಗೆಂದರೆ ಆನೆಯನ್ನು ಅಷ್ಟು ಸುಲಭವಾಗಿ ಹಿಡಿಯಲು ಮತ್ತು ಕೈವಶ ಮಾಡಿಕೊಳ್ಳುವುದೇನೆಂದರೆ ಅಸಾಧ್ಯದ ಮಾತು. ಒಂದು ದೊಡ್ಡ ಖೆಡ್ಡಾ ತಯಾರಿಸಿ ಮೇಲ್ಭಾಗದಲ್ಲಿ ಒಂದು ಚಾಪೆಯನ್ನು ಹರಡಿ ಅದರ ಮೇಲೆ ಮಣ್ಣು ಹಾಕಿ, ಉತ್ಕೃಷ್ಟವಾದ ಮೃದುವಾದ ಹುಲ್ಲನ್ನು ಬೆಳೆಸುತ್ತಾರೆ. ಆನೆಗಳ ಹಿಂಡನ್ನು ಓಡಿಸಿಕೊಂಡು ಬರುತ್ತಿರುತ್ತಾರೆ, ಆ ಸಮಯದಲ್ಲಿ ಸುಂದರವಾದ ಮೃದುವಾಗಿ ಕಾಣಿಸುವ ಆ ಸ್ಥಾನವನ್ನು ನೋಡಿ ಅಲ್ಲಿ ಧಾವಿಸಿದಾಗ ತಗ್ಗಿನಲ್ಲಿ ಬಿದ್ದು ಬಿಡುವುದು. ಆಗ ಅದನ್ನು ಪಳಗಿಸಿ ತಮ್ಮ ವಶಮಾಡಿಕೊಳ್ಳುವರು. ಅದರಂತೆ ಮನುಷ್ಯನು ಸ್ಪರ್ಶ ಸುಖದಿಂದ ಹಾನಿಗೊಳಗಾಗುವುದನ್ನು ತೊಂದರೆಗೆ ಈಡಾಗುವುದನ್ನು ತಡೆಗಟ್ಟುವುದೇ ಪದಾರ್ಥ ತ್ಯಾಗ.

ಇನ್ನು ಅಂತಃಕರಣಗಳ ಪದಾರ್ಥ ತ್ಯಾಗದ ಬಗ್ಗೆ ನೋಡೋಣ ಮನ, ಬುದ್ಧಿ, ಚಿತ್ತ ಮತ್ತು ಅಹಂಕಾರ.

ಮನ:– ಜಗತ್ತಿನ ಮಾನವರಿಗೆಲ್ಲ ದೇವನು ಈ ಮನಸ್ಸನ್ನು ಕೊಟ್ಟಿದ್ದಾನೆ. ಮನಸ್ಸು ತುಂಬಾ ಚಂಚಲ ಸ್ವಭಾವದಿಂದ ಕೂಡಿದೆ. ಏಕೆಂದರೆ ಪಂಚಭೂತಗಳಲ್ಲೊಂದಾದ ವಾಯುವಿನ ಅಂಶವು ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ವಾಯು ನಿರಂತರ ಚಲನಶೀಲವಾಗಿರುತ್ತದೆ. ನಿಂತಲ್ಲಿ ನಿಲ್ಲದೆ ಕುಳಿತಲ್ಲಿ ಕುಳ್ಳಿರಲೀಯದೆ ಸದಾ ಸಂಕಲ್ಪ ವಿಕಲ್ಪಗಳನ್ನು ಮಾಡುತ್ತಿರುತ್ತದೆ. ಒಂದು ಕ್ಷಣದಲ್ಲಿ ಪಾತಾಳಕ್ಕೆ ಇಳಿಯುತ್ತದೆ. ಒಂದು ಕ್ಷಣದಲ್ಲಿ ಆಕಾಶದೆತ್ತರಕ್ಕೆ ಹೋಗುತ್ತದೆ. ಪೂರ್ವ, ಪಶ್ಚಿಮ ಉದ್ದಗಲಕ್ಕೂ ಸಂಚರಿಸುತ್ತಿರುತ್ತದೆ. ಇಂಥ ಮನಸ್ಸನ್ನು ಏಕಾಗ್ರತೆ ಸಾಧಿಸಲು ನಿಗ್ರಹಿಸುವುದೇ ಪದಾರ್ಥತ್ಯಾಗ.

ಬುದ್ಧಿ:– ಎಲ್ಲರಿಗೂ ಜಗತ್ತಿನಲ್ಲಿ ಯಾವ ರೀತಿಯಿಂದ ವ್ಯವಹರಿಸಬೇಕೆಂದು ನಿರ್ಣಯಿಸಲು ಬುದ್ಧಿಯನ್ನು ದೇವನು ಕರುಣಿಸಿದ್ದಾನೆ. ಬುದ್ಧಿಯು ಅಗ್ನಿ ತತ್ವವನ್ನು ಹೆಚ್ಚಿನದಾಗಿ ಅವಗ್ರಹಿಸಿಕೊಂಡಿದೆ. ಮಂಕ ಬುದ್ಧಿಯವರು, ಚುರುಕು ಬುದ್ಧಿಯವರು, ಕುಹಕ ಬುದ್ಧಿಯವರು, ದುರ್ಬುದ್ಧಿಯವರು, ಅತಂತ್ರ, ಪರತಂತ್ರ, ಕುತಂತ್ರ ಹಾಗೂ ಸ್ವತಂತ್ರ ಬುದ್ಧಿಯವರು ಈ ಜಗತ್ತಿನಲ್ಲಿದ್ದಾರೆ.

ಸ್ವತಂತ್ರವಾದ, ವಿಮರ್ಷೆಯಿಂದ ಕೂಡಿದ. ಸುಬುದ್ಧಿ ಅಲ್ಲದುದನ್ನು ನಿರಾಕರಿಸುವುದೆ ಪದಾರ್ಥ ತ್ಯಾಗ.

ಚಿತ್ತ:– ಇದೊಂದು ಅತ್ಯದ್ಭುತವಾದ ಎಲ್ಲವನ್ನು ಸಂಗ್ರಹಿಸಿಟ್ಟುಕೊಳ್ಳಬಲ್ಲ ದೊಡ್ಡ ಉಗ್ರಾಣ ಇದ್ದ ಹಾಗೆ. ನೋಡಿದ್ದನ್ನು, ಕೇಳಿದ್ದನ್ನು, ಮಾತನಾಡಿದ್ದನ್ನು, ತಿಂದಿದ್ದನ್ನು, ಸ್ಪರ್ಶಿಸಿದ್ದನ್ನು, ವಾಸನೆ ತೆಗೆದುಕೊಂಡಿದ್ದನ್ನು, ಸಂಕಲ್ಪ–ವಿಕಲ್ಪ ಮಾಡಿದ್ದನ್ನು, ನಿರ್ಣಯಿಸಿದ್ದನ್ನು, ನಿರ್ಣಯಿಸಲಾರದೇ ಇದ್ದುದನ್ನು, ಅಹಂಕರಿಸಿದ್ದನ್ನು, ಅಹಂಕರಿಸಲಾರದೇ ಇದ್ದುದನ್ನು ಇವೆಲ್ಲದರ ಒಳ್ಳೆಯದು–ಕೆಟ್ಟದ್ದನ್ನು ಮುದ್ರಿಸಿ ಇಟು ಕೊಂಡಿರುತ್ತದೆ. ಇವೆಲ್ಲವುಗಳಲ್ಲಿ ಅಲ್ಲದ್ದನ್ನು ಲೌಕಿಕ ಹಾಗೂ ಪಾರಮಾರ್ಥಿಕ ಜೀವನಕ್ಕೆ ಬೇಡವಾದುದನ್ನು ಬಿಡುವುದೇ ಪದಾರ್ಥತ್ಯಾಗ ಚಿತ್ತವು ಅಪ್ಪು ತತ್ವವನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿದೆ.

ಅಹಂಕಾರ:– ಇದು ಪೃಥ್ವಿ ತತ್ವವನ್ನು ಬಹುಪಾಲುಳ್ಳದಾಗಿಸಿಕೊಂಡಿದೆ ಇದು ಒಳ್ಳೆಯದನ್ನು ಮಾಡುತ್ತೆ, ಕೆಟ್ಟದನ್ನು ಮಾಡುತ್ತೆ. ಇದರ ಆಳ ಹರಹು ಜಗದಗಲ, ಮುಗಿಲಗಲ, ಪಾತಾಳದಿಂದತ್ತತ್ತ, ಬ್ರಹ್ಮಾಂಡದಿಂದತ್ತತ್ತ ವ್ಯಾಪಿಸಿಕೊಂಡಿದೆ. ಜಗತ್ತಿನಲ್ಲಿ ಅಹಂಕಾರದಿಂದ ಕೆಟ್ಟದ್ದು ಆಗುತ್ತೆ ಅಹಂಕಾರದಿಂದ ಒಳ್ಳೆಯದೂ ಆಗುತ್ತೆ. ಅಹಂಕಾರದಿಂದ ಜಗತ್ತನ್ನೇ ಆಳಬಹುದು ಪ್ರಾಣಿ, ಪಕ್ಷಿ, ಗಿಡ–ಮರ, ಕ್ರಿಮಿ–ಕೀಟಕ್ಕಿಂತಲೂ ಕುಬ್ಜನಾಗಬಹುದು. ಯಾವುದನ್ನು ಧರಿಸುವುದೋ ಅದು ಭದ್ರವಾಗಿ ನೆಲೆ ನಿಲ್ಲುವುದು. ಕಾರಣ ಅಲ್ಲದುದನ್ನು ಉಚಿತವಲ್ಲದುದನ್ನು ತ್ಯಾಗ ಮಾಡುವುದೇ ಪದಾರ್ಥ ತ್ಯಾಗ.

ಹೀಗೆ ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಅಂತಃಕರಣಗಳಲ್ಲಿ ಬೇಡವಾದುದನ್ನು ಬಿಡುವುದೇ ಲಿಂಗಾಂಗಯೋಗದಲ್ಲಿರುವ ಪದಾರ್ಥತ್ಯಾಗಕ್ಕೆ ಸಂಬಂಧಿಸಿರುವುದು.

ಇನ್ನು ಪ್ರಸಾದ ಭೋಗ ವಿಷಯಕ್ಕೆ ಬರೋಣ.

“ವಚನದಲ್ಲಿ ನಿಮ್ಮ ನಾಮಾಮೃತ ತುಂಬಿ,
ನಯನದಲ್ಲಿ ನಿಮ್ಮ ಮೂರುತಿ ತುಂಬಿ,
ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ,
ಹೇ ಘನ ಲಿಂಗದೇವಾ ನಿಮ್ಮ ಚರಣ
ಕಮಲದೊಳಗಾನು ತುಂಬಿ”.

ಎಂದು ಧರ್ಮಪಿತ ಬಸವಣ್ಣನವರು ಪ್ರಸಾದ ಭೋಗಕ್ಕೆ ಸಂಬಂಧಿಸಿ ನಮಗೆ ಮನವರಿಕೆ ಮಾಡಿತ್ತಿದ್ದಾರೆ. ಒಂದು ಮನೆಯಲ್ಲಿನ ಕೊಳೆಯನ್ನು, ಕಸ–ಕಡ್ಡಿಯನ್ನು ತೆಗೆದು ಸ್ವಚ್ಛಗೊಳಸಿದ ಮೇಲೆ ಆ ಸ್ಥಳದಲ್ಲಿ ಒಳ್ಳೊಳ್ಳೆಯ ಸಾಮಾನು, ಪದಾರ್ಥಗಳನ್ನು ಇರಿಸಿದಾಗ ಆ ಮನೆಗೆ ಭೂಷಣ ಪ್ರಾಪ್ತಿಯಾಗುವುದು. ಅದರಂತೆ ಕರ್ಮೇಂದ್ರಿಯ, ಜ್ಞಾನೇಂದ್ರಿಯ ಮತ್ತು ಅಂತ:ಕರಣಗಳಲ್ಲಿರುವ ವಿಷಯಗಳಿಂದ ಆವೃತವಾಗಿರುವ ಕೆಟ್ಟ ಕ್ರಿಯೆಗಳು, ದುರ್ವಿಚಾರ ಹಾಗೂ ದುರ್ಲವೃತ್ತಿಗಳನ್ನು ಪದಾರ್ಥ ತ್ಯಾಗದಿಂದ ಸ್ವಚ್ಛ ಹಾಗೂ ಶುದ್ಧಿಗೊಳಿಸಿ ಆಯಾ ಸ್ಥಾನಗಳಲ್ಲಿ ಕ್ರಿಯೆ, ಜ್ಞಾನ ಹಾಗೂ ಅನುಭಾವಗಳನ್ನು ಅಳವಡಿಸಿಕೊಳ್ಳುವುದನ್ನು ವಿವೇಕಿಸುವಾ ವಾಕ್, ಪಾಣಿ, ಪಾದ, ಗುದ, ಗುಹ್ಯ :– (ಕರ್ಮೇಂದ್ರಿಗಳು

ವಾಕ್:– ಮಾತುಗಳಲ್ಲಿ ಸ್ಪಷ್ಟತೆ, ಸತ್ಯತೆ, ಶುದ್ಧತೆ ಇದ್ದರೆ ಅವು ಮಂತ್ರಸ್ವರೂಪವಾಗುವುವು. ಆಗ


“ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು,
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಲಿಂಗದೇವನೆಂತೊಲಿವನಯ್ಯಾ?”

ಮುಂದುವರಿಯುವುದು...

ಮಹಾನ್ ಶರಣ

ಅಂಬಿಗರ ಚೌಡಯ್ಯ

ಜಯಂತಿ ಜ.21



ಅಂಬಿಗರ ಚೌಡಯ್ಯ 12ನೇ ಶತಮಾನದ ಬಸವಣ್ಣನವರ ಅನುಯಾಯಿ ಶರಣ. ಸಾವಿರಾರು ವರ್ಷಗಳಿಂದ ಧರ್ಮ ದೇವರ ಬಗೆಗೆ ಜನ ಸಮೂಹದಲ್ಲಿದ್ದ ಮೂಢನಂಬಿಕೆಗಳನ್ನೆಲ್ಲ ಗುರು ಬಸವಣ್ಣನವರೊಂದಿಗೆ ಅಂಬಿಗರ ಚೌಡಯ್ಯ ಹೊಡೆದೋಡಿಸುತ್ತಲೇ ವಿಚಾರ ಪರವಾದ, ವಾಸ್ತವವಾದ ಅಂಶಗಳನ್ನು ಜನಮನದಲ್ಲಿ ಮೂಡಿಸಿದರು.

ಈತನ ಜನ್ಮಸ್ಥಳ ಗುಲ್ಬರ್ಗ ಜಿಲ್ಲೆಯ ಅಫಜಲ್‌ಪುರ ತಾಲೂಕಿನ ಚೌಡದಾನಪುರವೆಂದು ಸಂಶೋಧಕರು ಹೇಳಿದ್ದಾರೆ.

ಧರ್ಮ-ದೇವರು ಕೇವಲ ಶ್ರೀಮಂತರ ಸೋತ್ತಾಗಿದ್ದ ಅಂದಿನ ಸಂದರ್ಭದಲ್ಲಿ ಪೂಜೆ ಮೋಕ್ಷ ಕೇವಲ ನೇಮವಂತರ, ಬ್ರಾಹ್ಮಣರ ಗುತ್ತಿಗೆಯಾಗಿದ್ದ ಸಮಯದಲ್ಲಿ ಭಾಷ್ಯಕಾರರು ಹೇಳಿದ್ದೇ ಸರಿಯೆನ್ನುವ ವ್ಯವಸ್ಥೆಯಲ್ಲಿ ಚೌಡಯ್ಯ ಈ ಮೂವರನ್ನು ಕ್ರೂರ ಕರ್ಮಿಗಳೆಂದು, ಸಂದೇಹಿಗಳೆಂದು ಕಟುವಾಗಿ ಟೀಕಿಸುವುದರ ಮೂಲಕ ಇವರು ಹೋದ ದಾರಿಯಲ್ಲಿ ಯಾರೂ ಹೋಗ ಬಾರದೆಂದು ಸ್ಪಷ್ಟಪಡಿಸುತ್ತಾನೆ. ಇವರ ವಚನಗಳು ತುಂಬಾ ಖಾರವಾಗಿರುವುದು ಅವರ ಆತ್ಮ ಬಲವನ್ನು ಹಾಗೂ ಸತ್ಯವನ್ನು ಪ್ರತಿಪಾದಿಸುವಲ್ಲಿ ಹೊಂದಿದ್ದ ಧೈರ್ಯವನ್ನು ತೋರಿಸುತ್ತವೆ.

ಕಲ್ಯಾಣದ ಶಿವಶರಣರ ಮಧ್ಯದಲ್ಲಿ ಪ್ರಜ್ವಲವಾಗಿ ಬೆಳಗಿದ ಅಂಬಿಗರ ಚೌಡಯ್ಯ ಅವರು ಮಾತು ಕಟುವಾದರೂ ದಿಟವನ್ನೆ ನುಡಿದ ದಿಟ್ಟನೀತ ನುಡಿದಂತೆ ನಡೆದವನು, ಈತ ಒಳ್ಳೆಯ ವಚನಕಾರ, ಸುಮಾರು ಈತನ 278 ವಚನಗಳು ದೊರಕಿವೆ. ವಚನಾಂಕಿತವನ್ನು ತನ್ನ ಹೆಸರಿನಲ್ಲೆ ಬಳಸಿದ್ದಾನೆ.

ಏಕದೇವೋಪಾಸನೆ, ದೇವಾಲಯ ಗುಡಿಗುಂಡಾರ ವಿರೋಧಿಯಾದ ಚೌಡಯ್ಯ ಇಷ್ಟಲಿಂಗಪೂಜೆ ಪ್ರತಿಯೊಬ್ಬರು ಮಾಡಬೇಕು. ಇಲ್ಲಿ ಯಾವ ಭೇಧಭಾವ ಇಲ್ಲ. ದೇಹವನ್ನೇ ದೇವಾಲಯವಾಗಿಸಿಕೊಳ್ಳಲು ಅದು ಸಾಧನ ಎಂದನು. ಇಷ್ಟಲಿಂಗ ಪೂಜಿಸದೆ ಸ್ಥಾವರಲಿಂಗ ಪೂಜೆ ನಿಷಿದ್ಧ ಎಂದು ತಿಳಿಸಿದನು.

ಅಂಬಿಗರ ಚೌಡಯ್ಯ ಅವರ ಅಧ್ಯಯನಕ್ಕಾಗಿ ಮಂಗಳೂರು ವಿಶ್ವವಿದ್ಯಾಲಯದಲ್ಲಿ "ಅಂಬಿಗರ ಚೌಡಯ್ಯ ಅಧ್ಯಯನ ಪೀಠ" ಸ್ಥಾಪಿಸಲಾಗಿದೆ. ಆದರೆ ತುಂಬಾ ದುಃಖದ ಸಂಗತಿ ಎನೆಂದರೆ ಯಾರೋ ಒಬ್ಬ ಸ್ವಾಮೀಜಿಯವರು ಕೊರಳಲ್ಲಿ ಇಷ್ಟಲಿಂಗ ಹಾಗು ಹಣೆಯಲ್ಲಿ ವಿಭೂತಿಯನ್ನೆ ತೆಗೆದು ಪ್ರಕಟಿಸಿರೋದು ತಪ್ಪಾಗಿದೆ.



ಚಿಂತನ ಮಂಥನ

21ನೇ ಶತಮಾನದ ಸುಪ್ಪಾಣಿಯ ಮುತ್ತು

। ಶಾರದ ಬಸವರಾಜ್



ಗುರು ಬಸವಣ್ಣನವರೆಂಬ ನಾಯಕ ರತ್ನ, 12ನೇ ಶತಮಾನದ ಸ್ತೀ ರತ್ನಗಳ ಸಾಲಿನಲ್ಲಿ 21ನೇ ಶತಮಾನದ ಚಿನ್ಮುಲಾದ್ರಿಯ ಚಿತ್ಕಳೆ, ಗುರು ಬಸವ ಕಾರುಣ್ಯದ ಬೆಳಕನ್ನು ಹೊತ್ತು ಮತ್ತೆ ಪ್ರಜ್ವಲವಾಗಿ "ಸುಪ್ಪಾಣಿಯ ಮುತ್ತಿನಂತೆ" ಬೆಲೆ ಕಟ್ಟಲಾರದ, ಔನತ್ಯವನ್ನು ಪಡೆದು ಧೀರಯೋಗಿಣಿಯಾಗಿ, ಸಾಹಿತ್ಯ ಶಿರೋಮಣಿಯಾಗಿ, ಕಲ್ಯಾಣರತ್ನವಾಗಿ ,ಭಕ್ತಿ-ಜ್ಞಾನ-ವೈರಾಗ್ಯ ನಿಧಿಯಾಗಿ, ನಮ್ಮ ನಿಮ್ಮೆಲ್ಲರ, ನೆಚ್ಚಿನ ಮತ್ತು ಬಸವಾದಿ ಪ್ರಮಥರ ಆಶೋತ್ತರಗಳನ್ನು ಪೂರೈಸುತ್ತಿರುವ "ಅನರ್ಘ್ಯ ರತ್ನವೆಂದೇ" ಪ್ರಖ್ಯಾತವಾಗಿ ಪೂಜ್ಯ ಶ್ರೀ ಜಗದ್ಗುರು ಡಾ॥ ಮಾತೆ ಮಹಾದೇವಿಯವರು ಕಂಗೊಳಿಸುತ್ತಿದ್ದಾರೆ.

ವೀರವೈರಾಗ್ಯ ನಿಧಿ ಅಕ್ಕಮಹಾದೇವಿಯಂತೆ, ವೈರಾಗ್ಯ ಸಿರಿಯನ್ನು ಅಚ್ಚೊತ್ತಿ ಕೊಂಡು, ಸತ್ಯಕ್ಕನಂತೆ ಸತ್ಯ ನಿಷ್ಠೆಯನ್ನು ಹೊತ್ತು ,ಧೀರ ಶರಣೆ ಅಕ್ಕನಾಗಲಾಂಬಿಕೆಯಂತೆ ತತ್ವ ನಿಷ್ಠರಾಗಿ,ಅಕ್ಕಮ್ಮನಂತೆ ಶ್ರೇಷ್ಠ ವ್ರತಧಾರಿಣಿಯಂತೆ ನಮ್ಮ ಮಾತಾಜಿಯವರ ನಿಲುವು-ಸಾಹಸ 12ನೇ ಶತಮಾನದ ಶರಣೆಯರನ್ನು ಹೋಲುತ್ತದೆ.

12ನೇ ಶತಮಾನದಲ್ಲಿ ತಲೆದೋರಿದ ಮೂಢಾಚರಣೆಗಳನ್ನು, ವ್ರತಾಚರಣೆಗಳನ್ನು ಕಟ್ಟುನಿಟ್ಟಿನಿಂದ ತಿರಸ್ಕಾರ ಮಾಡಿ ನಿಜವಾದ ನಿಜಾಚರಣೆಗಳನ್ನು ಬೆಳಕಿಗೆ ತೋರಿದ ಅಕ್ಕಮ್ಮನಂತೆ, ಪೂಜ್ಯ ಶ್ರೀ ಜಗದ್ಗುರು ಮಾತಾಜಿಯವರು ಇಂದಿನ ಶತಮಾನದಲ್ಲಿ ಮತ್ತೆ ತಲೆದೋರಿದ ಮೂಢಾಚರಣೆಗಳನ್ನು ನಿರ್ಮೂಲನೆ ಮಾಡಲು ಸತ್ಯದ ಬೆಳಕನ್ನು ಚೆಲ್ಲಿದ್ದಾರೆ.

ಸಾಮಾನ್ಯವಾಗಿ ಇಂದಿನ ಜನರು ಯಾವುದೇ ಶುಭ ಕಾರ್ಯವನ್ನು ಪ್ರಾರಂಭ ಮಾಡುವ ಮೊದಲು, ಗಣಪತಿ ಪೂಜೆ ಮಾಡಿ ಪ್ರಾರಂಭಿಸುತ್ತಾರೆ. ಈ ಆಚರಣೆಗಳನ್ನು ಖಂಡಿಸಿ ನಾವು ಮೊದಲು ಮಾಡ ಬೇಕಾದ ಪೂಜೆ ಯಾವುದು ಎಂದು ತೋರಿಸಿ ಕೊಟ್ಟಿದ್ದಾರೆ ಗುರು ಮಾತಾಜಿಯವರು.

ಶರಣೆ ಅಕ್ಕಮ್ಮ ಹೇಳುವಂತೆ

ಆವಾವ ವ್ರತಕ್ಕೂ ಗುರು
ಲಿಂಗ ಜಂಗಮವೆ ಮೂಲ
ಮಂತ್ರ ಆವಾವುದ ತಾ
ಕೊಂಬ ಕೊಡುವಲ್ಲಿ ಲಿಂಗ
ಜಂಗಮವ ಮುಂದಿಟ್ಟು ಕೊಂಬುದೆ
ಶುದ್ಧ ಶ್ರೀ ಕ್ರೀ ಹೀಗಲ್ಲದೆ ಲಿಂಗ
ಜಂಗಮ ಹೊರತೆಯಾಗಿ
ಮತ್ತೊಂದ ಕೊಂಡ'ನಾಯಿತಾದಡೆ
ಎನಗಲ್ಲದ ದ್ರವ್ಯ, ಎನಗಿದೆ ಭಾಷೆ
ಆಚಾರವೆ ಪ್ರಾಣವಾಥ, ರಾಮೇಶ್ವರ
ಲಿಂಗ ಸಾಕ್ಷಿಯಾಗಿ

ಈ ಒಂದು ಶ್ರೇಷ್ಠ ವಚನ ಓದುತ್ತಿದ್ದಂತೆ ನೆನಪಾಗುವ "ಶ್ರೇಷ್ಠ ವ್ರತಧಾರಿಣಿ" ಪೂಜ್ಯ ಶ್ರೀ ಮಾತಾಜಿಯವರನ್ನು ಬಿಟ್ಟರೆ ಬೇರೆ ಯಾರೂ ಇಲ್ಲವೇನೋ

ಪುಟ 31ರಲ್ಲಿ ಮುಂದುವರಿಯುವುದು...



ಮಾತೆ ಕಸ್ತೂರಿದೇವಿ

ಮಂಡೆ ಮಾಸಿದಡೆ ಮಹಾಮಜ್ಜನವ ಮಾಡುವುದು;
ವಸ್ತ್ರ ಮಾಸಿದಡೆ ಮಡಿವಾಳರಿಗಿಕ್ಕುವುದು;
ಮನದ ಮೈಲಿಗೆಯ ತೊಳೆಯಬೇಕಾದಡೆ
ಕೂಡಲಚೆನ್ನಸಂಗಯ್ಯನ ಶರಣರ ಅನುಭಾವವ ಮಾಡುವುದು.

– ಚಿನ್ಮಯಜ್ಞಾನಿ ಚೆನ್ನಬಸವಣ್ಣನವರು

ಮೊದಲ ದಿನ ಒಂದನೇ ತರಗತಿಗೆ ಸೇರಲು ಶಾಲೆಗೆ ಹೋಗಿದ್ದ ಪುಟ್ಟ ಬಾಲಕ ಸಂಜೆ ಶಾಲೆಯಿಂದ ಮನೆಗೆ ಬಂದವನೆ ತನ್ನ ಪಾಟಿ ಚೀಲವನ್ನು ಎಸೆದು, ಕಾಲಿನ ಶೂ ಬಿಚ್ಚಿ ಒಂದೆಡೆ ಇಟ್ಟು ತಾಯಿಯನ್ನು ಅರಸುತ್ತಾ ಅಡುಗೆ ಮನೆಗೆ ಓಡಿದ. ಮಗನ ಅವಸರವನ್ನು ಕಂಡ ತಾಯಿಗೆ ಏನೋ ಕುತೂಹಲ. ತಾಯಿ ಕೇಳುವ ಮೊದಲೇ ಮಗ ಪ್ರಶ್ನಿಸಿದ. 'ಅಮ್ಮಾ... ನಾನೊಂದು ಪ್ರಶ್ನೆ ಕೇಳ್ತೀನಿ ಉತ್ತರ ಹೇಳ್ತೀಯಾ?!'



'ಕೇಳು ಮಗು ಗೊತ್ತಿದ್ದರೆ ಹೇಳುತ್ತೇನೆ.' ಎಂದು ತಾಯಿ ಉತ್ತರಿಸಿದಳು. ಶಾಲೆಗೆ ಹೋದ ಮೊದಲ ದಿನವೇ ಮಗ ಏನೋ ಗಹನವಾದುದನ್ನೆ ಕಲಿತು ಬಂದಿದ್ದಾನೆ ಎಂದು ತಾಯಿಗೆ ತುಂಬಾ ಸಂತೋಷವಾಯಿತು.

' ಅಮ್ಮಾ...ಅತಿ ವೇಗವಾಗಿ ಹೋಗುವ ವಾಹನ ಯಾವುದು?' ತಾಯಿ ಸಹಜವಾಗಿ ಉತ್ತರಿಸಿದಳು **'ಮಗು, ವಿಮಾನ'** ಎಂದು.

ಮಗ **'ಅಲ್ಲ'** ಎಂದು ತಲೆ ಅಲ್ಲಾಡಿಸಿದ.

ತನ್ನ ಉತ್ತರಕ್ಕೆ ಪೆಚ್ಚಾದರೂ ಮಗನ ಬುದ್ಧಿವಂತಿಕೆಗೆ ತಾಯಿಗೆ ಹಿಗ್ಗೋ ಹಿಗ್ಗು. ಹೀಗಾಗಿ ತಾಯಿ ಬೆರಗಿನಿಂದ ಮಗನನ್ನು ನೋಡುತ್ತಾ **'ನೀನೆ ಹೇಳು'** ಎಂದಳು.

ಮಗ ಸೋಲದೆ ಮತ್ತೆ ಕೇಳಿದ **'ಅಮ್ಮ, ನಾನು ಸರಿ ಉತ್ತರ ಹೇಳಿದರೆ ಏನು ಕೊಡುವೆ?!'**

'ಓಹ್ ಲಂಚ ಬೇರೆ ಬೇಕೆ? ಉಂಡೆ ಕೊಡುತ್ತೇನೆ' ಎಂದಳು ತಾಯಿ. ಆಗ **ಮಗ ತಟ್ಟನೆ ಹೇಳಿತು.....'ಮನಸ್ಸು'** ಎಂದು.

ಇಂಥ ಅಗೋಚರವಾದ ಚಂಚಲಯುಕ್ತ ಮನಸ್ಸಿರುವುದರಿಂದಲೇ ಮಾನವನಿಗೆ ಮನುಷ್ಯ ಎಂಬ ಹೆಸರು ಬಂತು ಎನ್ನುತ್ತದೆ ಮಾನವಶಾಸ್ತ್ರ. ಇಂಥ ಪ್ರಬಲವಾದ ಅಂತರ್ಇಂದ್ರಿಯವನ್ನು ಪರಮಾತ್ಮನು ಮಾನವನ ಶರೀರದಲ್ಲಿ ಸುಲಭವಾಗಿ ಕೈಗೆ ಸಿಗದಂತೆ, ಯಾರಿಗೂ ಕಾಣದಂತೆ ಹುದುಗಿಸಿಟ್ಟಿರುವುದು ಸೋಜಿಗವೇ ಸರಿ. ಇಂದಿಗೂ ಮನಸ್ಸಿನ ಮೇಲೆ ಸಾಕಷ್ಟು ಅಧ್ಯಯನ-ಸಂಶೋಧನೆ-ಪ್ರಯೋಗಗಳು ನಡೆಯುತ್ತಿದ್ದರೂ ಅದರ ಆಳ-ಹರವು-ವಿಸ್ತಾರದ ಬಗ್ಗೆ ವಿಜ್ಞಾನಿಗಳ ಕುತೂಹಲ ತಣಿದಿಲ್ಲ ಎಂಬುದು ಅದರ ಗಮ್ಯತೆಗೆ ಸಾಕ್ಷಿಯಾಗಿದೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ 'ನಾವು ಮನಸ್ಸಿನ ನೂರರಷ್ಟು ಶಕ್ತಿಯಲ್ಲಿ ಕೇವಲ ಒಂದು ಭಾಗವನ್ನು ಮಾತ್ರ ಉಪಯೋಗಿಸುತ್ತಿದ್ದೇವೆ' ಎಂದು. ಅಂದರೆ ಉಳಿದ ಶೇ.99% ಭಾಗದ ಮನೋಬಲವನ್ನು ನಿರ್ಲಕ್ಷಿಸಿದ್ದೇವೆ ಎಂದಾಯಿತು. ಅಲ್ಲ 100 ರಲ್ಲಿ ಒಂದು ಅಂಶದಷ್ಟು ಮನೋಬಲವನ್ನು ಬಳಸಿಕೊಂಡೇ ಇಷ್ಟೊಂದು ಸಂಶೋಧನೆಗಳು, ಆವಿಷ್ಕಾರಗಳು, ಸಾಧನೆಗಳು ಅಥವ ಅವಾಂತರ(ಹಗರಣ)ಗಳು ಆಗುತ್ತಿರಬೇಕಾದರೆ ಮನಸ್ಸಿನ ಸಾಮರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿದ್ದೆ ಆದರೆ ಏನಾಗಬಹುದು ಎಂಬುದನ್ನು ಊಹಿಸಲು ಅಸಾಧ್ಯವಾದ ಸಂಗತಿಯೆ ಸರಿ.

ಮನಸ್ಸಿನ ಏಕಾಗ್ರತೆಯ ಬಗ್ಗೆ ಬರೆದಿರುವ ಅನೇಕ ಪುಸ್ತಕಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಮುಖವು ಮನಸ್ಸಿನ ಕನ್ನಡಿ(face is index of mind) ಎಂಬ ಪ್ರಸಿದ್ಧ ನಾಣ್ನುಡಿಯನ್ನು ಕೇಳಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಕುವೆಂಪು ಅವರು ರಚಿಸಿರುವ ರಕ್ತಾಕ್ಷಿ ಎಂಬ ನಾಟಕದಲ್ಲಿ ಖಳನಾಯಕನ ಪಾತ್ರದ ವ್ಯಕ್ತಿತ್ವವನ್ನು ವರ್ಣಿಸುತ್ತಾ ಹೇಳುತ್ತಾರೆ 'ಮುಖ ನೋಡಲು ಸುಂದರವಾಗಿದ್ದರು, ಅಂತರಂಗದ ಮಲಿನತೆ ಮುಖದಲ್ಲಿ ಎದ್ದು ಕಾಣುತ್ತಿತ್ತು' ಎಂದು. ಇಲ್ಲಿ ದೇಹದ ಸೌಂದರ್ಯಕ್ಕೂ-ಮನಸ್ಸಿಗೂ ಸಂಬಂಧವಿಲ್ಲ ಎಂದಾಯಿತು. ಅಲ್ಲದೆ ಸುಂದರವಾಗಿದ್ದವರ ಮನಸ್ಸು ಸಹ ಸುಂದರವಾಗಿರಬೇಕು ಎಂದೇನಿಲ್ಲ; ಕುರೂಪಿಯಾದವರ ಮನಸ್ಸು ಮಲಿನತೆ(ಮೈಲಿಗೆ)ಯಿಂದ ಕೂಡಿರುತ್ತದೆ ಎಂದು ಹೇಳಲು ಬರುವುದಿಲ್ಲ. ಮನಸ್ಸು ಪ್ರಶಾಂತವಾಗಿದ್ದರೆ ಮುಖಾರವಿಂದವೂ ಪ್ರಶಾಂತತೆಯಿಂದ ಕೂಡಿರುತ್ತದೆ. ಹೀಗಾಗಿ ಮನಸ್ಸಿಗೂ-ಮುಖಕ್ಕೂ ಅವಿನಾಭಾವ ಸಂಬಂಧವಿದೆ ಎಂದಾಯಿತು. ಬಸವಾದಿ ಪ್ರಮಥರು ವಚನಗಳಲ್ಲಿ ಮನಸ್ಸನ್ನು ಮಂಗ, ನಾಯಿ, ಸರ್ಪ ಮುಂತಾದುವಕ್ಕೆ ಹೋಲಿಸಿ ಜರಿದಿದ್ದಾರೆ. ಈಗಿನ ಐಟಿ, ಬಿಟಿ ಯುಗದಲ್ಲಿ ಮುಖ್ಯವಾಗಿ ಯುವಜನತೆ ಪಡೆದಿರುವ ಶಿಕ್ಷಣದ ಫಲವಾಗಿ ದುಡಿಮೆ ಮತ್ತು ದುಡ್ಡು, ದುಡ್ಡಿಗೆ ತಕ್ಕ ವಿಲಾಸಿ ಜೀವನ ಶೈಲಿಗೆ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು

ಕೊಟ್ಟು ಮನಸ್ಸಿನ ಆರೋಗ್ಯವನ್ನು ನಿರ್ಲಕ್ಷಿಸಿ ಮನೋರೋಗಿಗಳಾಗಿರುವುದೇ ಅಲ್ಲದೆ ಸಾಮಾಜಿಕವಾಗಿ ಸಂಸ್ಕೃತಿಹೀನರಾಗಿ, ವಿಕೃತಮತಿಗಳಾಗಿ ವರ್ತಿಸುತ್ತಿರುವುದನ್ನು ನೋಡುತ್ತಿದ್ದೇವೆ.

ಮನಸ್ಸೊಂದು ಸರಿಯಿದ್ದರೆ ಎಲ್ಲವೂ ಸರಿಯಿದ್ದಂತೆ! ಮನಸ್ಸು ಕೆಟ್ಟರೆ ಎಲ್ಲವೂ ಕೆಟ್ಟಂತೆ!. ಇಂಥ ಮನಸ್ಸನ್ನು ಮಲಿನಗೊಳಿಸಲು ಈ ಜಗತ್ತಿನಲ್ಲಿ ಅನೇಕ ವಿಷಯಗಳಿವೆ; ಸಾಕಷ್ಟು ಅವಕಾಶಗಳು ಇವೆ. ಒಬ್ಬ ಶಿಕ್ಷಣತಜ್ಞ ಹೇಳುತ್ತಾನೆ 'ಶತೃವಾದವನು ಎದುರಿಗೆ ಬಂದರೆ ಧೈರ್ಯವಾಗಿ ಎದುರಿಸಬಹುದು; ಕಾಣದ ಶತೃವನ್ನು ಎದುರಿಸುವುದು ಹೇಗೆ?! ಈಗಿನ ಡಿಜಿಟಲ್ ಯುಗದಲ್ಲಿ ಕಂಪ್ಯೂಟರ್, ಅಂತರ್ಜಾಲ, ಟಿ.ವಿ, ಮೊಬೈಲುಗಳು ಕಾಣದ ಶತೃವಿನಂತೆ ಇಂದಿನ ಮಕ್ಕಳ ಮತ್ತು ಯುವಜನಾಂಗದ ಮೇಲೆ ಎರಗುತ್ತಿವೆ' ಎಂದು. ಕಂಪ್ಯೂಟರ್ ತಜ್ಞನೊಬ್ಬ ಹೇಳುತ್ತಾನೆ 'ಒಬ್ಬ ಕೆಟ್ಟ ಮನುಷ್ಯನಿಗಿಂತಲೂ ಕಂಪ್ಯೂಟರ್ ರಾಕ್ಷಸನಂತೆ ಕೆಲಸ ಮಾಡಬಲ್ಲುದು' ಎಂದು. ಸೈಬರ್ ಅಪರಾಧಗಳು ಈ ಮಾತಿಗೆ ಸಾಕ್ಷಿಯಾಗಿವೆ. ಎಂದಿಗಿಂತಲೂ ಇಂದಿನ ನವಜನಾಂಗ ಏಕೆ ವಿಕೃತವಾಗಿ ವರ್ತಿಸುತ್ತಿದೆ ಎಂದು ಈಗ ನಮಗೆ ಅರಿವಾಗುತ್ತಿದೆ ಅಲ್ಲವೆ. ಕಂಪ್ಯೂಟರ್, ಅಂತರ್ಜಾಲ, ಟಿ.ವಿ, ಮೊಬೈಲುಗಳು ಎಷ್ಟು ಪ್ರಯೋಜನಕಾರಿಯೋ ಅದಕ್ಕಿಂತಲೂ ಹೆಚ್ಚಿನ ಅಪಾಯಗಳನ್ನು ತಮ್ಮ ಒಡಲಲ್ಲಿ ತುಂಬಿಕೊಂಡಿವೆ. ಹೀಗೆ ಹಲವಾರು ರೀತಿಯಲ್ಲಿ ಮೈಲಿಗೆಯಾಗಿರುವ ಮನಸ್ಸನ್ನು ಶುಚಿಗೊಳಿಸಲು ಅಗತ್ಯವಾದುದನ್ನು ಮಾತ್ರ ಹುಡುಕಿಕೊಂಡು ಹೋಗಬೇಕು. ವೈದ್ಯಕೀಯ ಸಮೀಕ್ಷೆ ಪ್ರಕಾರ ಈಗ ಮನೋಶಾಸ್ತ್ರದಲ್ಲಿ ಶಿಕ್ಷಣ ಪಡೆದು ಮನೋವೈದ್ಯರಾಗಲು ಮುಂದೆ ಬರಲು ಹಿಂಜರಿಯುತ್ತಿದ್ದಾರಂತೆ! ಕಾರಣ ಈ ವೃತ್ತಿಯಲ್ಲಿ ಹಣ ಮಾಡಲು ಆಗುವುದಿಲ್ಲ ಎಂದು. ಮೊದಲೆಲ್ಲ ಸಣ್ಣಪುಟ್ಟ ಕಾರಣಕ್ಕೆ ಮನಸ್ಸು-ಬುದ್ಧಿಯನ್ನು ಕೆಡಿಸಿಕೊಂಡವರನ್ನು ಆಪ್ತಸಮಾಲೋಚನೆಗೆ ಒಳಪಡಿಸಿದರೆ ಸಮಸ್ಯೆ ಬಗೆಹರಿಯುವ ಭರವಸೆ ಸಿಗುತ್ತಿತ್ತು. ಆದರೆ ಇತ್ತೀಚಿನ ಸಾಮಾಜಿಕ ಪರಿಸರದಲ್ಲಿ ಉಂಟಾಗುತ್ತಿರುವ ಅತ್ಯಂತ ಕ್ಲಿಷ್ಟ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಆಪ್ತಸಮಾಲೋಚಕರಿಗೂ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ ಎಂದು ಸಮೀಕ್ಷೆಯೊಂದು ಹೇಳುತ್ತದೆ. ಕಾರಣ ತಮ್ಮೊಳಗಿನ ಸತ್ಯವನ್ನು ಪ್ರಮಾಣಿಕವಾಗಿ ಬಹಿರಂಗಪಡಿಸಲು ಹಿಂಜರಿಯುವುದು, ತಮ್ಮ ದೌರ್ಬಲ್ಯಗಳನ್ನು ಒಪ್ಪಿಕೊಳ್ಳದಿರುವುದು, ಹೊಂದಿಕೊಳ್ಳಲು ಆಗದಿರುವುದು ಮತ್ತು ಪರಿಹಾರವೇ ಅಸಾಧ್ಯವೆಂಬಂತೆ ವರ್ತಿಸುವುದು. ಏಕೆಂದರೆ ಈ ಸಮಸ್ಯೆಗಳೆಲ್ಲ ಉದ್ಭವವಾಗಿರುವುದು ಅರಿಷಡ್ವರ್ಗ, ಸಪ್ತಮದ, ಅಜ್ಞಾನ, ಅಹಂಕಾರ, ಋಣಾತ್ಮಕ ಆಲೋಚನೆಗಳು ಜತೆಗೆ ಹೆಣ್ಣು(ಗಂಡು), ಹೊನ್ನು, ಮಣ್ಣು, ಅಧಿಕಾರ, ಅಂತಸ್ತುಗಳ ತಳಹದಿಯ ಮೇಲೆ! ಆದ್ದರಿಂದ ಎಂದಿಗಿಂತಲೂ ಇಂದಿಗೆ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಮನಶುದ್ಧಿಯಾಗಬೇಕಾದ ಅಗತ್ಯ ಹೆಚ್ಚಾಗಿ ಕಂಡುಬರುತ್ತಿದೆ. ಇಂಥ ಸಂದರ್ಭಗಳಲ್ಲಿ ನಮಗೆ ವಚನಗಳು ದಾರಿದೀಪವಾಗಬಲ್ಲವು ಎಂದರೆ ಉತ್ಪ್ರೇಕ್ಷೆಯಲ್ಲ.

ಮನಶುಚಿಗೆ ಸಂಬಂಧಿಸಿದ ವಚನಗಳಲ್ಲಿ ಶರಣರು ಸತ್ಸಂಗಕ್ಕೆ ಅತಿ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಿರುವುದು ಚಿಂತನಾರ್ಹವಾಗಿದೆ. ಅಂಥ ಆಯ್ದ ಕೆಲವು ವಚನಗಳನ್ನು ಈಗ ಮನನ ಮಾಡೋಣ. ಹುಟ್ಟಿನಿಂದ-ನಿರ್ಗಮನದ ವರೆಗೂ ಗುರು-ಲಿಂಗ-ಜಂಗಮದ ಪರುಷ ಸಾನಿಧ್ಯ, ಅನುಭವ ಮಂಟಪದ ಜ್ಞಾನಸರಸಿಯಲ್ಲಿ ವಿಹರಿಸಿದ ಬಸವಹಂಸೆ ಚೆನ್ನಬಸವಣ್ಣನವರು ತಮ್ಮ ವಚನದಲ್ಲಿ ಮಂಡೆ ಮಾಸಿದಡೆ ಮಹಾಮಜ್ಜನವ ಮಾಡುವುದು ಎಂದು ಲೌಕಿಕವಾದ ಉಪಮೆಯೊಂದಿಗೆ ಮನಶುಚಿಯ ಕೆಲಸವನ್ನು ಪ್ರಾರಂಭಿಸುತ್ತಿದ್ದಾರೆ. ಅಂದರೆ ಸಾಮಾನ್ಯವಾಗಿ ತಲೆ ಕೊಳೆಯಾದಾಗ ವಾರಕ್ಕೊಮ್ಮೆಯೊ ಅಥವ ಎರಡು ಬಾರಿಯೊ ತಲೆಗೆ ಸ್ನಾನ ಮಾಡುವುದುಂಟು. ಆದರೆ

ಇಲ್ಲಿ ಚೆನ್ನಬಸವಣ್ಣನವರು ಮಹಾಮಜ್ಜನ ಎನ್ನುತ್ತಿದ್ದಾರೆ. ಇದು ಬಹಳ ದೊಡ್ಡ ಸ್ನಾನ ಎಂದಾಯಿತು. ಹಾಗಾದರೆ ಇದು ಹೇಗಿರುತ್ತದೆ? ನೆತ್ತಿಗೆ ಶುದ್ಧವಾದ ಹರಳೆಣ್ಣೆ ಅಥವ ಕೊಬ್ಬರಿ ಎಣ್ಣೆಯನ್ನು ಹಿತವಾಗುವಂತೆ ತಟ್ಟಿ, ತಲೆಯ ಸುತ್ತಲೂ ಬೆರಳುಗಳಿಂದ ಮಸಾಜ್ ಮಾಡುವುದು. ನಂತರ ಶರೀರಕ್ಕೂ ಎಣ್ಣೆ ಹಚ್ಚಿ ಮಸಾಜ್ ಮಾಡುವುದು. ಇದರಿಂದ ದೇಹ-ಮನಸ್ಸುಗಳಲ್ಲಿ ನವಚೈತನ್ಯ ತುಂಬಿ ಉತ್ಸಾಹ ಇಮ್ಮಡಿಸುತ್ತದೆ. ನಂತರ ಬಿಸಿನೀರು-ಸೀಗೆಪುಡಿಯಿಂದ ಸ್ನಾನ ಮಾಡಬೇಕು. ಇದನ್ನು ಅಭ್ಯಂಜನ ಸ್ನಾನ ಎನ್ನಲಾಗುತ್ತದೆ. ಇಂಥ ಸ್ನಾನವನ್ನು ದೀಪಾವಳಿಗೋ, ಯುಗಾದಿಗೋ ಮೀಸಲಾಗಿಡದೆ ವಾರಕ್ಕೊಮ್ಮೆಯಾದರೂ ಮಾಡಿದರೆ ಕಣ್ಣು ಮತ್ತು ಶರೀರ ತಂಪಾಗಿ, ರಕ್ತಚಲನೆಗೆ ಸಹಾಯಕವಾಗಿ ಆರೋಗ್ಯವಾಗಿರುತ್ತದೆ. ಮುಂದೆ ಹೇಳುತ್ತಾರೆ ವಸ್ತ್ರ ಮಾಸಿದಡೆ ಮಡಿವಾಳರಿಗಿಕ್ಕುವುದು. ಆನಂದವಾಗಿ ಸ್ನಾನ ಮಾಡಿದ ಮೇಲೆ ನಾವು ಬಟ್ಟೆ ಧರಿಸುವುದಿಲ್ಲವೆ? ಅಂಥ ಬಟ್ಟೆ ಶುಚಿಯಾಗಿ, ಮಡಿಯಾಗಿ ಇರಬೇಕು. ಅಂದಾಗ ಇಂಥ ಬಟ್ಟೆ ಕೊಳೆಯಾದಾಗ ಮಡಿವಾಳರಿಗೆ ಕೊಟ್ಟು ಅಥವ ನಾವಾದರೂ ತೊಳೆದು ಶುಚಿ ಮಾಡಿರಬೇಕು. ಇಲ್ಲಿಯೂ ಅಷ್ಟೆ ಸ್ವಲ್ಪ ಕೊಳೆಯಾದ ಬಟ್ಟೆಯಾದ-ರೆ ನಾವೇ ತೊಳೆಯಬಹುದು. ಜಾಸ್ತಿ ಕೊಳೆಯಾಗಿದ್ದರೆ ಅದನ್ನು ಮಡಿವಾಳರಿಗೆ ಕೊಟ್ಟು ತೊಳೆಸುವುದು ಶ್ರೇಯಸ್ಕರ. ಅಂಥ ಕೊಳೆಯಾದ ಬಟ್ಟೆಗಳನ್ನು ಶುಚಿಯಾಗಿ ತೊಳೆಯುವ ವೃತ್ತಿರಹಸ್ಯ ಅವರಿಗೆ ಚನ್ನಾಗಿ ಗೊತ್ತಿರುತ್ತದೆ.

ಇಂಥ ಲೌಕಿಕ ಉಪಮೆಗಳನ್ನು ಅರ್ಥ ಮಾಡಿಕೊಳ್ಳುವುದು ಎಲ್ಲರಿಗೂ ಸುಲಭಸಾಧ್ಯ. ಆದರೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಂದ ಕೊಳೆಯಾಗಿರುವ ಮನಸ್ಸನ್ನು ಶುಚಿಗೊಳಿಸುವುದು ಹೇಗೆ?

ಶರಣ ಬಂಧುಗಳೇ, ನಿಮಗೊಂದು ವಿಷಯ ಗೊತ್ತಿದೆಯೆ? ಗೊತ್ತಿದ್ದರೆ ಹೇಳಿ; ಗೊತ್ತಿಲ್ಲದಿದ್ದರೆ ಕೇಳಿ. ಎಲ್ಲಾ

ಕ್ಷೇತ್ರಗಳಲ್ಲೂ ವಿಜ್ಞಾನ ಸಾಕಷ್ಟು ಅಭಿವೃದ್ಧಿ ಸಾಧಿಸಿ ಮುಂದುವರಿದಿದ್ದರೂ ಮನಸ್ಸನ್ನು ಶುಚಿಗೊಳಿಸುವ ಸೋಪು, ಡಿರ್ಟಜೆಂಟ್, ಶಾಂಪು ಯಾವುದನ್ನು ಕಂಡು ಹಿಡಿಯಲು ಆಗದಿರುವುದು ಮಾನವನ ಸಿಮೀತ ಬುದ್ಧಿಶಕ್ತಿಗೆ ದೇವರು ಎಸೆದಿರುವ ಸವಾಲು ಎನ್ನಬಹುದೇ?. ಈ ವಿಷಯದಲ್ಲಿ ದೇವರು ಕೈಬಿಟ್ಟರೂ ಮನುಕುಲದ ಕ್ಷೇಮಕ್ಕಾಗಿ ದುಡಿದ ಶರಣರು ಮಾತ್ರ ಪರಮಾತ್ಮನು ಒಡ್ಡಿರುವ ಸವಾಲಿಗೆ ಪರಿಹಾರ ರೂಪವಾಗಿ ದಾರಿ ತೋರಿಸಿದ್ದಾರೆ ಎಂದರೆ ತಪ್ಪಲ್ಲ. ಮನಸ್ಸನ್ನು ತೊಳೆದು ಶುಚಿಗೊಳಿಸಲು ಇರುವ ಏಕೈಕ ಉಪಾಯವೆಂದರೆ ಶರಣರು, ಅನುಭಾವಿಗಳ ಸಂಗದಲ್ಲಿ ನಿರಂತರವಾಗಿ ಆಡಿ, ಪಾಡಿ, ನಲಿದು ಸುಖಿಸುವುದು; ಅವರ ಸೇವೆ ಮಾಡುವುದು, ಒಡನಾಡುವುದು ಮುಂತಾದ ಸತ್ಕ್ರಿಯೆಗಳಿಂದ ಮನಸ್ಸನ್ನು ಶುಚಿಗೊಳಿಸಬೇಕು.

ಚಿನ್ಮಯಜ್ಞಾನಿ ಚೆನ್ನಬಸವಣ್ಣನವರು ತಮ್ಮ ಅನುಭವವನ್ನು ಹೀಗೆ ಬಿಂಬಿಸಿದ್ದಾರೆ.

ಪಾತಾಳದಗ್ಘಣಿಯ ನೇಣಿಲ್ಲದೆ
ತೆಗೆಯಬಹುದೆ, ಸೋಪಾನದ ಬಲದಿಂದಲ್ಲದೆ?
ಶಬ್ದಸೋಪಾನವ ಕಟ್ಟಿ ನಡೆಯಿಸಿದರು
ಪುರಾತರು, ದೇವಲೋಕಕ್ಕೆ ಬಟ್ಟೆ ಕಾಣಿರೋ.
ಮರ್ತ್ಯರ ಮನದ ಮೈಲಿಗೆಯ ಕಳೆಯಲೆಂದು
ಗೀತಮಾತೆಂಬ ಜ್ಯೋತಿಯ ಬೆಳಗಿ ಕೊಟ್ಟರು,
ಕೂಡಲಚೆನ್ನಸಂಗನ ಶರಣರು.

-ಚಿನ್ಮಯಜ್ಞಾನಿ ಚೆನ್ನಬಸವಣ್ಣನವರು

ಇದು ಬಹಳ ಪ್ರಸಿದ್ಧವಾದ ವಚನ. ತುಂಬಾ ಆಳದಲ್ಲಿರುವ ನೀರನ್ನು ಮೇಲೆತ್ತಲು ಬರಿ ಕೈಯಿಂದ ಸಾಧ್ಯವೆ? ಇಲ್ಲ. ಹಾಗಾದರೆ ಏನು ಮಾಡಬೇಕು? ಹಗ್ಗಕ್ಕೆ ಕೊಡ ಕಟ್ಟಿ ಕೆಳಗೆ ಬಿಟ್ಟು ಜೀವಜಲವಾದ ನೀರನ್ನು ಎತ್ತಿಕೊಳ್ಳಬೇಕು. ಅದಿಲ್ಲದಿದ್ದರೆ ಮೆಟ್ಟಿಲುಗಳನ್ನು ಕಟ್ಟಿ ಅದರ ನೆರವಿನಿಂದ ಇಳಿದು ನೀರನ್ನು ತೆಗೆದುಕೊಂಡು ಬರಬೇಕು. ಅದೇ ರೀತಿ ಶರಣರು ವಚನಗಳೆಂಬ ಮೆಟ್ಟಿಲುಗಳನ್ನು ನಿರ್ಮಿಸಿ ಅದರ ನೆರವಿನಿಂದ ಮನದಾಳದಲ್ಲಿರುವ

ಜ್ಞಾನಾಮೃತವನ್ನು ಎತ್ತಿ ತೋರಿಸಿದರು. ಸ್ವರ್ಗ ಅಥವ ದೇವಲೋಕವನ್ನು ತನ್ಮೂಲಕ ಭೂಮಿಯಲ್ಲೆ ಸೃಷ್ಟಿಸಿ ಮುಕ್ತಿ ಪಡೆಯಲು ಕಾರಣಕರ್ತರಾದರು. ಇನ್ನು ಮರ್ತ್ರ್ಯರು ಅಂದರೆ ಹುಟ್ಟು-ಸಾವುಗಳಿಗೆ ಒಳಗಾಗಿ ಈ ಭುವಿಯಲ್ಲಿ ವಾಸಿಸುವ ಮನುಕುಲದ ಮನಸ್ಸಿನ ಮೈಲಿಗೆಯನ್ನು ಕಳೆಯಲು ವಚನಗಳೆಂಬ ಜ್ಯೋತಿಯನ್ನು ಬೆಳಗಿಸಿ ಕೊಟ್ಟರು. ವಚನಗಳೆಂಬ ಪ್ರಣತೆಯಲ್ಲಿ, ಭಕ್ತಿಯೆಂಬ ಎಣ್ಣೆ ಹಾಕಿ, ಸದಾಚಾರ ಎಂಬ ಬತ್ತಿ ಇಟ್ಟು, ಸುಜ್ಞಾನವೆಂಬ ಜ್ಯೋತಿಯನ್ನು ಹಚ್ಚಿ ಕೊಟ್ಟರು. ಆ ದೈವೀಮಯ ಪ್ರಕಾಶದಲ್ಲಿ ಪರಮಾತ್ಮನನ್ನು ನಂಬಿದ ಶರಣರು ತಮ್ಮ ಮನ ಮತಿ ಬದುಕನ್ನು ಸಾರ್ಥಕಗೊಳಿಸಿದರು.

ಗುರು ಬಸವಣ್ಣನವರು ವೀರಗಣಾಚಾರಿ ಮಡಿವಾಳ ಮಾಚಿತಂದೆಯವರ ವಸ್ತ್ರಗಳನ್ನು ಮಡಿಮಾಡುವ ಕಾಯಕವನ್ನು ಮನದ ಮೈಲಿಗೆ ತೊಳೆಯಲಿಕ್ಕೆ ಹೋಲಿಸಿ ಕೊಂಡಾಡುತ್ತಿರುವುದು ಹೀಗೆ-

ಎನ್ನ ಮಲತ್ರಯದಲ್ಲಿ ಹೊದಕುಳಿಗೊಂಡ
ಮನದ ಮೈಲಿಗೆಯ ತಂದು, ತನ್ನ ಮನೆಗೆ
ಕೊಂಡುಹೋಗಿ ಹಾಯ್ಕಿದಡೆ, ಕೈಮುಟ್ಟಿದಡೆ
ಆಗದೆಂದು ತನ್ನ ಪಾದದೊಳಗೆ ಮೆಟ್ಟಿ, ಅಲುಬಿ
ಸೆಳೆದನಯ್ಯಾ ಸೂತ್ರಧಾರಿ ಮನದ ಮೈಲಿಗೆಯ
ಕಳೆಯಬಂದನಯ್ಯ ಮಡಿವಾಳನು

ಬಸವಯೋಗಿ ಸಿದ್ಧರಾಮೇಶ್ವರರ ಸದ್ಭಾವದ ದರ್ಶನವನ್ನು ಈ ವಚನದ ಸಾಲು ನಮಗೆ ಮಾಡಿಸುತ್ತಿರುವುದನ್ನು ನೋಡೋಣ.

ಎಲೆ ದೇವಾ, ನೀನೊಬ್ಬನೆ ಹಲವು ರೂಪಾಗಿ
ಬಂದೆಯಯ್ಯ ; ಭಕ್ತಿಯಲ್ಲಿ ಬಸವಣ್ಣನಾಗಿ
ಬಂದಿರಿ ; ಮನದ ಮೈಲಿಗೆಯ ತೊಳೆಯುವಲ್ಲಿ
ಮಡಿವಾಳನಾಗಿ ಬಂದಿರಿ;

ಸಂಕಲ್ಪ ವಿಕಲ್ಪಂಗಳ ಧರಿಸಿದಲ್ಲಿ ಮನವೆನಿಸಿತ್ತು ಎಂಬಂತೆ ಸದ್ಗ್ರಂಥಗಳ ಅಧ್ಯಯನ, ಸಜ್ಜನರೊಡನಾಟ ಮುಂತಾದ ಸಾತ್ವಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಿಂದ ಮನಮತಿಗಳನ್ನು ಶುಚಿಗೊಳಿಸುತ್ತಾ ಬಾಳನ್ನು ಹಸನಾಗಿಸುವ ಸಂಕಲ್ಪ ಮಾಡೋಣ.

ಆಚಾರ ಅರಿವು ಅನುಭಾವ

ಸತ್ತ ಸಮುದ್ರಕ್ಕಿಂತ ಸಪ್ತ ಸಮುದ್ರವಾಗೋಣ



ಪೂಜ್ಯಶ್ರೀ ಬಸವಪ್ರಭು ಸ್ವಾಮೀಜಿ.

ಸಪ್ತ ಸಮುದ್ರಗಳ ಬಗ್ಗೆ ನಾವೆಲ್ಲ ಕೇಳಿದ್ದೇವೆ ಆದರೆ ಸತ್ತ ಸಮುದ್ರಗಳ ಬಗ್ಗೆ ಕೇಳಿರುವುದು ಬಹಳ ಕಡಿಮೆ. ಜೋರ್ಡಾನ್‌ವೆಂಬುವುದು ಇಸ್ರೇಲ್ ದೇಶದ ಬಳಿ ಇರುವ ಒಂದು ಬೃಹತ್ ಸರೋವರ ಅದರ ಹೆಸರು ಡೆಡ್‌ಸೀ. ಅಂದರೆ ಸತ್ತ ಸಮುದ್ರ ಎಂದು. ಜೋರ್ಡಾನ್ ನದಿ ಹುಟ್ಟುವುದು ಗೆಲಲಿ ಸರೋವರದಿಂದ. ಸಿಹಿನೀರಿನ ಈ ನದಿ ಸುಮಾರು 320ಕಿ.ಮೀ ದೂರ ಹರಿಯುತ್ತದೆ. ಉದ್ದಕ್ಕೂ ಪುಷ್ಪ ಉದ್ಯಮಕ್ಕೆ ಹೆಸರಾದ ಇಸ್ರೇಲ್‌ನ ತೋಟಗಳಿಗೆ ನೀರುಣಿಸುತ್ತದೆ. ಜನರ ಬಾಯಾರಿಕೆಯನ್ನು ತಣಿಸುತ್ತದೆ. ಕೊನೆಯಲ್ಲಿ ಸತ್ತ ಸಮುದ್ರವನ್ನು ಸೇರುತ್ತದೆ. ಇದನ್ನು ಸತ್ತ ಸಮುದ್ರ ಎಂದು ಏಕೆ? ಕರೆಯುತ್ತಾರೆ ಗೊತ್ತಾ; ಇದು ಪ್ರಪಂಚದ ಅತ್ಯಂತ ಕೆಳಮಟ್ಟದ ಸರೋವರ, ಸಮುದ್ರ ಮಟ್ಟಕ್ಕಿಂತ 1300 ಅಡಿಗಳಷ್ಟು ಕೆಳಗಿದೆ ಮತ್ತು 1000 ಚದುರ ಕಿ.ಮೀ ಗಳಷ್ಟು ವಿಶಾಲವಾಗಿದೆಯಂತೆ. ಈ ಸಮುದ್ರದ ವಿಶೇಷವೆಂದರೆ ಇದರ ನೀರು ಬೇರೆ ಸಮುದ್ರದ ಉಪ್ಪು ನೀರಿಗಿಂತ ಏಳುಪಟ್ಟು ಹೆಚ್ಚು ಉಪ್ಪುಪ್ಪಾಗಿರುತ್ತದೆ. ಇಷ್ಟೊಂದು ಉಪ್ಪು ಇರುವ ಕಾರಣದಿಂದಾಗಿ ಈ ಸಮುದ್ರದಲ್ಲಿ ಮೀನು, ಮೊಸಳೆ ಮುಂತಾದ ಇನ್ನಿತರ ಯಾವ ಜಲಚರ ಪ್ರಾಣಿಗಳು ಬದುಕುವುದಿಲ್ಲ. ಈ ನೀರನ್ನು ಗಿಡ ಮರಗಳಿಗೆ ಹಾಕಿದರೆ ಅವೂ ಸಹಿತ ಬದುಕುವುದಿಲ್ಲವಂತೆ. ಈ ನೀರು ಇಷ್ಟು



ಉಪ್ಪಾಗಲು ಕಾರಣವೇನೆಂದರೆ, ಈ ಸಮುದ್ರ ತನ್ನೆಲ್ಲ ನೀರನ್ನು ಜೋರ್ಡಾನ್ ನದಿಯಿಂದ ಪಡೆಯುತ್ತದೆ. ನೀರು ಸೇರುತ್ತಲೇ ಹೋಗುತ್ತದೆ ಆದರೆ ಒಂದು ಹನಿ ನೀರನ್ನು ಹೊರಗೆ ಬಿಡುವುದಿಲ್ಲ. ಹಾಗಾಗಿ ಉಪ್ಪಿನ ಅಂಶ ಹೆಚ್ಚುತ್ತಲೆ ಹೋಗುತ್ತದೆ. ಹೀಗಾಗಿ

ಈ ಸಮುದ್ರ ಸತ್ತ ಸಮುದ್ರವಾಗುತ್ತದೆಯಂತೆ. ಇದು ಸತ್ತ ಸಮುದ್ರದ ಕಥೆ. ಆದರೆ ಇದು ನಮ್ಮ ಬಾಳಿಗೂ ಅನ್ವಯವಾಗುತ್ತದೆಯೇ ನೋಡೋಣ ... ಈ ಒಂದು ಸೂತ್ರ ಎಲ್ಲ ದಿಕ್ಕಿನಿಂದಲೂ ಅನ್ವಯವಾಗುತ್ತದೆ. ಪ್ರೀತಿ, ವಿಶ್ವಾಸ, ಉಪಕಾರ, ವಿದ್ಯೆ, ಹಣ, ದಾನ ಮತ್ತು ಸಹಕಾರ ಜಗತ್ತಿನಲ್ಲಿ ಅನೇಕ ಜನ ಸಂಸಾರದಿಂದ ಸಮಾಜದಿಂದ ಪ್ರೀತಿ, ವಿಶ್ವಾಸ, ಹೆಸರು, ಅಂತಸ್ತು, ಯಶಸ್ಸು ಎಲ್ಲವನ್ನು ಪಡೆದಿರುತ್ತಾರೆ. ಆದರೆ ಸಕಾಲದಲ್ಲಿ ಅವುಗಳನ್ನು ಉಪಯೋಗಕ್ಕೆ ತರದೆ ಖಿನ್ನರಾಗಿರುತ್ತಾರೆ. ಒಂದು ಕಡೆ ಸುಭಾಷಿತ ಹೇಳುವಂತೆ "ಶಾಂತಿ ಸೌಹಾರ್ದ, ನಗು ಹಾಗು ಪ್ರೀತಿ ಇವುಗಳ ಸಮ್ಮಿಶ್ರಣವೇ ಸಂತಸ. ಆದ್ದರಿಂದ ಸಂತಸದಿಂದಿರಲು ಇವುಗಳನ್ನು ತಪ್ಪದೆ ಕಾಯ್ದುಕೊಳ್ಳಿ." ಅಂದ ಹಾಗೆಯೇ ಗುರು ಬಸವಣ್ಣನವರು ತಮ್ಮದೊಂದು ವಚನದಲ್ಲಿ ಹೀಗೆ ಹೇಳುತ್ತಾರೆ.

ಎನಿ ಬಂದಿರಿ ಹದುಳವಿದ್ದೀರಾ ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೇ, ಕುಳ್ಳಿರಿ ಎಂದರೆ ನೆಲ ಕುಳಿ ಹೋಹುದೇ ಒಡನೆ ನುಡಿದರೆ ಶಿರ ಹೊಟ್ಟೆ ಒಡೆಯುವುದೇ ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ ಕೆಡವಿ ಮೂಗಕೊಯ್ಯುವುದ ಮಾಣ್ಬನೆ ನಮ್ಮ ಲಿಂಗದೇವ.

(ಬವ245)

ಎನ್ನುವಂತೆ ನಮ್ಮಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ, ಸಹಕಾರ, ಕೃತಜ್ಞತೆ ಇವು ಜೀವನದ ಅವಿಭಾಜ್ಯ ಅಂಗವಾಗಬೇಕು. ಇಲ್ಲವಾದರೆ ಏನೂ ಪ್ರಯೋಜನವಿಲ್ಲ; ಪರಮಾತ್ಮನು ಮೆಚ್ಚುವುದಿಲ್ಲ. ಅದೇ ರೀತಿಯಾಗಿ ವಿದ್ಯೆಯನ್ನು ತೆಗೆದು-ಕೊಂಡಾಗ ನಮ್ಮ ದೇಶದಲ್ಲಿ ಯುವಕರು ಹಲವಾರು ಪದವಿಗಳನ್ನು ಪಡೆದುಕೊಂಡು ಉದ್ಯೋಗ ಸಿಗಲಾರದೆ ಮನೆಯಲ್ಲಿಯೇ ಸೋಮಾರಿಗಳಾಗಿ ಕಾಲ ಕಳೆಯುತ್ತಾರೆ. ಇಂಥವರನ್ನು ಕಂಡು ಖ್ಯಾತ ಇತಿಹಾಸ ತಜ್ಞ ಲಂಡನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ, ಭಾರತದ ಯುವಕರನ್ನು ಕರಿತು ಉಪನ್ಯಾಸ ನೀಡುವಾಗ ಅವರು ಒಂದು ಮಾತನ್ನು ಹೇಳುತ್ತಾರೆ ಅದನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

"ಭಾರತದ ಯುವಕರಲ್ಲಿ ದೇಶಪ್ರೇಮ, ಉದ್ಯಮಶೀಲತೆ, ಪೌರಪ್ರಜ್ಞೆ, ಧರ್ಮವಂತಿಕೆ, ವಿಚಾರಶೀಲತೆ ಇವೆಲ್ಲಾ ಇದ್ದರೂ ಸಕಾಲದಲ್ಲಿ ಪ್ರಯೋಜನ ಪಡೆಯುವ ಬದಲು ಅವರು ದೌರ್ಬಲ್ಯಗಳನ್ನು ತಮ್ಮದಾಗಿಸಿಕೊಳ್ಳಲು ಇಲ್ಲಿನ ವಿದ್ಯಾವಂತರು ಯತ್ನಿಸುತ್ತಾರೆ." ನಿಜವಾಗಿಯೂ ಇಂತಹ ಮಾತನ್ನು ನೆನಪಿಸಿಕೊಂಡಾಗ ಇವತ್ತು ಶಿಕ್ಷಣವನ್ನು ಮುಗಿಸಿ ಅದೆಷ್ಟು ಜನ ಯುವಕರು ತಮ್ಮ ಊರುಗಳಿಗೆ ಹೋಗಿ ಪರಾಭವಗೊಂಡಿರುತ್ತಾರೆ. ಅದರ ಬದಲು ತಮ್ಮ ಊರಲ್ಲಿರುವ ಬಡವ, ಅನಾಥ, ನಿರ್ಗತಿಕ ಮಕ್ಕಳಿಗೆ ತಾವು ಗಳಿಸಿಕೊಂಡಿರುವ ಜ್ಞಾನವನ್ನು ಧಾರೆ ಎರೆದರೆ, ಇನ್ನಷ್ಟು ತಮ್ಮ ಜ್ಞಾನ ವೃದ್ಧಿಯಾಗುವುದರ ಜೊತೆಗೆ ಆ ಮಕ್ಕಳ ಶಿಕ್ಷಣ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಇದನ್ನು ಬಿಟ್ಟು ಯಾವುದೇ ಕೆಲಸವಿಲ್ಲದೆ ನಿರದ್ಯೋಗಿಗಳಾಗಿ, ಉಂಡಾಡಿ ಗುಂಡರಾಗಿ, ತಂದೆ ತಾಯಿಗಳ ಹತ್ತಿರ ದಿನಾಲೂ ಜಗಳ ಮಾಡುತ್ತಾ ಸುಖಾ ಸುಮ್ಮನೆ ತಿರುಗುತ್ತಿರುತ್ತಾರೆ ಇದರಿಂದ ಏನು ಪ್ರಯೋಜನ?.

ಹಾಗೆಯೇ ಧಾರ್ಮಿಕ ರಂಗದಲ್ಲಿಯೂ ಅನೇಕ ತಪಸ್ವಿಗಳು, ಅನುಭಾವಿಗಳು, ಮಠ ಪೀಠದ ಸ್ವಾಮಿಗಳು ಎಷ್ಟೋ ಜ್ಞಾನವನ್ನು ಗಳಿಸಿದರೂ ಸಹಿತ ಕೇವಲ ಕಲ್ಲಿನ ಗವಿಯ, ಮನೆ ಅಥವಾ ಮಠದ ಒಳಗಡೆಯೇ ಸೀಮಿತವಾಗಿರುವುದು ಒಂದು ಕಡೆಯಾದರೆ, ಅತಿಯಾದ ವೈಜ್ಞಾನಿಕ ಜ್ಞಾನವನ್ನು ಪಡೆದು-ಕೊಂಡರೂ ಸಹಿತ ಕೆಲವು ಸ್ವಾಮಿಗಳು, ಪವಾಡ, ತಾಯತ, ಮಂತ್ರ ತಂತ್ರ, ಮಾಟ ನಿಂಬೆಹಣ್ಣು ಕಟ್ಟಿ ಮೂಢಸಂಪ್ರದಾಯವನ್ನು ಜೀವಂತ ಇಡುತ್ತಿರುವುದು ಮತ್ತೊಂದು ಕಡೆ. ಹೀಗೆ ಇದರಲ್ಲಿಯೇ ಕಾಲಹರಣ ಮಾಡುತ್ತಿರುವುದರ ಬದಲಿಗೆ ವೈಚಾರಿಕ ಪ್ರಜ್ಞೆಯಿಂದ ವೈಜ್ಞಾನಿಕ ತಳಹದಿಯ ಮೇಲೆ

ಜ್ಞಾನ ಕೊಟ್ಟರೆ ಅದೆಷ್ಟೋ ನವ ಯುವಕರು ಪರಿವರ್ತನೆಯಾಗುತ್ತಾರೆ ಎಂಬ ಅರಿವಾಗಲಿ, ಜ್ಞಾನವನ್ನು ಕೊಡುವ ಹಂಬಲವಾಗಲಿ ಇರುವುದಿಲ್ಲ. ಅದನ್ನು ಪಡೆದುಕೊಳ್ಳುವ ಜ್ಞಾನವು ಯುವಕರಲ್ಲಿ ಮೊಳೆಯುತ್ತಿಲ್ಲವೆಂಬುದು ಖೇದನೀಯ ಸಂಗತಿ.

ಇನ್ನು ಲೌಕಿಕ ಪ್ರಂಪಚದ ಜನರ ಮಧ್ಯದಲ್ಲಿ ನಿಂತು ನೋಡಿದಾಗ ಜಗತ್ತಿನಲ್ಲಿ ಇಂದು ಪ್ರೀತಿ, ವಿಶ್ವಾಸ, ನಂಬಿಕೆ, ಪರಸ್ಪರ ಸಹಕಾರ ಜ್ಞಾನಕ್ಕಿಂತ ಹೆಚ್ಚಿನ ಸಮಯವನ್ನು ಕೇವಲ ದುಡ್ಡು ಗಳಿಸಲಿಕ್ಕಾಗಿಯೇ ಹಗಲು ರಾತ್ರಿ ದುಡಿಯುತ್ತಲೆ ಇರುತ್ತಾರೆ. ಇವರಿಗೆ ಕಾಯಕ ಎನ್ನುವ ಶಬ್ಧದ ಅರ್ಥವೇ ಗೊತ್ತಿರುವುದಿಲ್ಲ. ಗುರು ಬಸವಣ್ಣನವರು ಹೇಳಿದ್ದಾರಲ್ಲ "ಕಾಯಕವೇ ಕೈಲಾಸ" ಎಂದು. ಅದಕ್ಕೆ ನಾವು ಕಾಯಕ ಮಾಡ್ತೀವಿ ಅನ್ನುತ್ತಾರೆ. ಆದರೆ ಅದರ ಹಿಂದೆ ದಾಸೋಹವೇ ದೇವಧಾಮ ಎಂಬ ಶಬ್ಧವನ್ನು ಮರೆತೇ ಬಿಟ್ಟಿರುತ್ತಾರೆ.

ಕಾಯಕವೆಂದರೆ ಪೂಜ್ಯ ಮಾತಾಜಿ ಯವರು ಹೇಳುವಂತೆ ಅದರಲ್ಲಿ ಮೌಲ್ಯಗಳು ಇರಬೇಕು. ಭೌತಿಕ ಮೌಲ್ಯಗಳು, ನೈತಿಕ ಮೌಲ್ಯಗಳು, ಆಧ್ಯಾತ್ಮಿಕ ಮೌಲ್ಯಗಳು ಇವು ಇರಲಾರದೆ, ಅವರ ಜೀವನವು ಕೇವಲ ಕತ್ತೆ ದುಡಿತವಾಗಿರುತ್ತದೆ. ಕಾಯಕ ಮಾಡಿ ಗಳಿಸಲಿ ಪರವಾಗಿಲ್ಲ, ಅದರೆ ಸ್ವಲ್ಪವಾದರೂ ಧರ್ಮ, ದೇವರಿಗಾಗಿ, ಸಮಾಜಕ್ಕಾಗಿ ವಿನಿಯೋಗವಾಗಬೇಕು. ಇವತ್ತಿನ ಜನಗಳಲ್ಲಿ ಕೊಟ್ಟು ಹೆಚ್ಚಿಸಿಕೊಳ್ಳುವ ಪರಿಜ್ಞಾನವೇ ಇರುವುದಿಲ್ಲ. ಹಾಗೆಂದರೇನು? ಗುರು ಬಸವಣ್ಣನವರು ತಮ್ಮದೊಂದು ವಚನದಲ್ಲಿ ತುಂಬಾ ಚೆನ್ನಾಗಿ ಪ್ರಸ್ತಾಪ ಮಾಡುತ್ತಾರೆ.

ಮರಕ್ಕೆ ಬಾಯಿ ಬೇರೆಂದು ತಳಕ್ಕೆ
ನೀರನೆರೆದಡೆ ಮೇಲೆ ಪಲ್ಲವಿಸಿತ್ತು ನೋಡಾ
ಲಿಂಗದ ಬಾಯಿ ಜಂಗಮವೆಂದು
ಪಡಿಪದಾರ್ಥವ ನೀಡಿದಡೆ ಮುಂದೆ ಸಕಲ
ಪಡಿ ಪದಾರ್ಥವನೀವನು ನಮ್ಮ ಲಿಂಗದೇವ.
(ಬವ423)

ಮರಕ್ಕೆ ಬಾಯಿ ಎಂದರೆ ಬೇರು; ಅದರ ಬುಡಕ್ಕೆ ನೀರನ್ನು ಹಾಕಿದಾಗ ನಮಗೆ ಆ ಮರ ಫಲವನ್ನು ನೀಡುತ್ತದೆ. ಸಾಮಾನ್ಯವಾಗಿ ನಾವೆಲ್ಲರು ಗಮನಿಸುತ್ತೇವೆ. ಹಾಗೆಯೇ ಪರಮಾತ್ಮನ ಇನ್ನೊಂದು ಮುಖ ಜಂಗಮ ಅಂದರೆ ಸಮಾಜ, ಧರ್ಮ ಎಂದರ್ಥ.

ಅನಾಥರಿಗೆ, ಬಡವರಿಗೆ, ಶೋಷಿತರಿಗೆ ಅಥವಾ ಧರ್ಮದ ಕಾರ್ಯಗಳಿಗೆ ದಾಸೋಹ ಮುಖಾಂತರವಾಗಿ ನೀಡಿದಾಗ ಹೆಸರು, ಯಶಸ್ಸು, ಪ್ರತಿಫಲ ಬರುವುದಲ್ಲದೆ; ಪರಮಾತ್ಮನ ಅನುಗ್ರಹವು ಆಗುತ್ತದೆ. ಅಷ್ಟೇ ಅಲ್ಲದೆ ಅದರ ಮೂಲಕವಾಗಿ ಮಾಡುವ ಕಾಯಕದಲ್ಲಿ ಹೆಚ್ಚು ಹೆಚ್ಚಿನ ಆದಾಯ ಇಮ್ಮಡಿಯಾಗುತ್ತದೆ ಎನ್ನುತ್ತಾರೆ. ಹಾಗಂತ ಹೇಳಿ ಗಳಿಸಿದ್ದೆಲ್ಲವನ್ನು ಕೊಡಬೇಕಂತಲ್ಲ; ಗಳಿಸಿದ್ದರಲ್ಲಿ ನೀವು ನಿಮ್ಮ ಕುಟುಂಬ ಮನೆ, ಸುಖ, ಸಂತೋಷದಿಂದ ಬದುಕಿ ಬಾಳಿ ಮಿಕ್ಕಿದ್ದನ್ನು ಸಮಾಜಕ್ಕೆ ವಿನಿಯೋಗ ಮಾಡಬೇಕೆಂದು ಸರ್ವಜ್ಞನ ಆದೇಶವಾಗಿದೆ.

ಸೊಡರೆಣ್ಣೆ ತೀರಿದರೆ ಕೊಡನೆತ್ತಿ
ಹೊಯ್ಯುವರೆ? ಕೊಡಬೇಡ ಕೊಡದೆ
ಇರಬೇಡ ಬಡವನೆಂದು ॥ ಎನಬೇಡ
ಧರ್ಮವನ್ನು ಬಿಟ್ಟಿರ ಬೇಡ ಸರ್ವಜ್ಞ

ಸ್ವ ಪ್ರಯತ್ನದಿಂದ ದೇವರ ಕರುಣೆಯಿಂದ ಸಾಕಷ್ಟು ಹಣ ಗಳಿಸಿದ್ದರೆ ಸಾಧ್ಯವಾದಷ್ಟು ಪ್ರಮಾಣದಲ್ಲಿ ದಾನ ಧರ್ಮವನ್ನು ಮಾಡುವುದು ಲೇಸು. ಅನೇಕ ವ್ಯಕ್ತಿಗಳು, ದೊಡ್ಡ ಉದ್ಯಮಿಗಳು ಇದೇ ಕಾರಣ-ಕ್ಕಾಗಿ ಇಂತಿಷ್ಟು ಹಣ ಎಂದು ನಿಗದಿಮಾಡಿ ಸಮಾಜ ಸೇವಾ ಕಾರ್ಯಗಳಿಗೆ ಬಳಸುವುದನ್ನು ನಾವು ನೋಡಬಹುದು. ಉದಾಹರಣೆಗೆ, ಅಮೇರಿಕದ ಬಿಲ್‌ಗೇಟ್ ಸಾಪ್ಟವೇರ್ ಕಂಪನಿ ಹುಟ್ಟು ಹಾಕಿದ ದೊಡ್ಡ ಉದ್ಯಮಿದಾರ. ಜಗತ್ತಿನ ಶ್ರೀಮಂತರ ಪಟ್ಟಿಯಲ್ಲಿ ಇವರ ಸ್ಥಾನ ಮೊದಲಿನದು. ಇವರು ಗಳಿಸಿದ ಆದಾಯದಲ್ಲಿ ಅರ್ಧ ಭಾಗ ವಿಶ್ವಸಂಸ್ಥೆಯ ಕಾರ್ಯಯೋಜನೆಗಳಿಗೆ ನೇರವಾಗಿ ವಿನಿಯೋಗ ಮಾಡುತ್ತಿದ್ದಾರೆ. ಇವರು ಇಲ್ಲಿಯವರೆಗೂ ಗಳಿಸಿದ ಒಟ್ಟು

ಬಳಸುವುದನ್ನು ನಾವು ನೋಡಬಹುದು. ಉದಾಹರಣೆಗೆ, ಅಮೇರಿಕದ ಬಿಲ್‌ಗೇಟ್ ಸಾಪ್ಟವೇರ್ ಕಂಪನಿ ಹುಟ್ಟು ಹಾಕಿದ ದೊಡ್ಡ ಉದ್ಯಮಿದಾರ. ಜಗತ್ತಿನ ಶ್ರೀಮಂತರ ಪಟ್ಟಿಯಲ್ಲಿ ಇವರ ಸ್ಥಾನ ಮೊದಲಿನದು. ಇವರು ಗಳಿಸಿದ ಆದಾಯದಲ್ಲಿ ಅರ್ಧ ಭಾಗ ವಿಶ್ವಸಂಸ್ಥೆಯ ಕಾರ್ಯಯೋಜನೆಗಳಿಗೆ ನೇರವಾಗಿ ವಿನಿಯೋಗ ಮಾಡುತ್ತಿದ್ದಾರೆ. ಇವರು ಇಲ್ಲಿಯವರೆಗೂ ಗಳಿಸಿದ ಒಟ್ಟು ಆಸ್ತಿ ಭೂಮಿಯಿಂದ ಚಂದ್ರನ ವರೆಗೆ ಒಂದರ ಮೇಲೊಂದರಂತೆ ಒಂದು ಸಾವಿರ ರೂಪಾಯಿ ನೋಟನ್ನು ಇಟ್ಟರೂ ಇನ್ನು ಹದಿನೈದು ದಶಲಕ್ಷ ಡಾಲರ್ ಅವನಲ್ಲಿ ಉಳಿಯುತ್ತದೆಯಂತೆ, ಅಂದರೆ 218 ವರ್ಷ ದಿನಕ್ಕೆ ಆರು ಕೋಟಿ ಖರ್ಚು ಮಾಡುವಷ್ಟು ದುಡ್ಡು ಇದೆಯಂತೆ. ಇಷ್ಟಿಲ್ಲಾ ಗಳಿಸಿದರೂ ಆಶ್ಚರ್ಯ ಸಂಗತಿ ಎಂದರೆ, ತಮ್ಮ ಮಕ್ಕಳ ಹೆಸರಲ್ಲ ಆಸ್ತಿ ಮಾಡದೆ ಇರವುದು. ಅವರು ಹೇಳುವ ಪ್ರಕಾರ ತಮ್ಮ ಮಕ್ಕಳು ತನ್ನಂತೆ ದುಡಿದು ಮೇಲೆ ಬರಬೇಕು ಅವರಿಗಾಗಿ ನನ್ನ ಒಂದಿಷ್ಟು ಆಸ್ತಿಯನ್ನಾಗಲಿ, ದುಡ್ಡನ್ನಾಗಲಿ ಕೂಡಿಡುವುದಿಲ್ಲ ಕೇವಲ ಶಿಕ್ಷಣ ಕೊಡಿಸುವುದು ನನ್ನ ಜವಬ್ದಾರಿ ಎನ್ನುತ್ತಾರೆ. ಅಂದಾಗ ದೊಡ್ಡವರು ದೊಡ್ಡ ಮಟ್ಟದಲ್ಲಿ ಸೇವೆ ಸಲ್ಲಿಸಿದರೆ, ಸಣ್ಣವರು ಸಣ್ಣ ಪ್ರಮಾಣದಲ್ಲಿಯಾದರೂ ಸೇವೆ ಮಾಡಬೇಕಲ್ಲವೆ? ಕೈಲಾದಷ್ಟು ದಾನ ಮಾಡುವುದು ನಮ್ಮ ಅವಿಭಾಜ್ಯ ಅಂಗವೆಂದು ಅರಿಯಬೇಕಲ್ಲವೆ?.

ಒಂದು ಆಣೆಕಟ್ಟಿನಲ್ಲಿ ನೀರನ್ನು ತುಂಬುವವರೆಗೆ ಜಲಮಂಡಳಿಯವರು ಹೊರಗೆ ನೀರನ್ನು ಬಿಡುವುದಿಲ್ಲ. ಆಣೆಕಟ್ಟು ತುಂಬಿದಾಗ ಗೇಟಿನ ಮುಖಾಂತರವಾಗಿ ಸಂಗ್ರಹಿಸಲ್ಪಟ್ಟ ತುಂಬಿದ ನೀರನ್ನು, ಸ್ಥಿರ ಪ್ರಮಾಣದ ಮಟ್ಟದವರೆಗೆ ಒಂದಿಷ್ಟು (ಟಿಎಮ್‌ಸಿ) ನೀರನ್ನು ಬಿಡುತ್ತಾರೆ. ಮತ್ತೆ ಪುನಃ ಶೇಖರಣೆಯಾಗುತ್ತಾ ಇರುತ್ತದೆ. ಆಣೆಕಟ್ಟು ಭರ್ತಿಯಾದರೂ ನೀರನ್ನು ಬಿಡದೆ ಇದ್ದರೆ, ಕಟ್ಟಿದ ಆಣೆಕಟ್ಟಿನ ದಡ

ಒಂದು ಕೂತೂಹಲಕಾರಿ ಪ್ರಸಂಗ

ಒಮ್ಮೆ ಪೂಜ್ಯ ಮಾತಾಜಿಯವರ ಶಿಷ್ಯರು ಹಣ ಮತ್ತು ಹೃದಯ ಎರಡರಲ್ಲಿ ಶ್ರೀಮಂತರು. ಅವರು ದಾನ ಧರ್ಮ ಮಾಡುವ ಪ್ರಮಾಣ ನೋಡಿ ಒಬ್ಬರು, ಇಷ್ಟೊಂದು ಧರ್ಮಕ್ಕಾಗಿ ದಾನ ಮಾಡುತ್ತೀರಿ ಎಲ್ಲಿಂದ ಬರುತ್ತದೆ ಎಂದು ಆಶ್ಚರ್ಯದಿಂದ ಕೇಳಿದರಂತೆ. ಅವರು ಹೇಳಿದ ಸರಳ ಮಾತು "ನನ್ನ ಬಳಿ ಹಣವಿದೆ, ನಾನು ದಾನ ಮಾಡುತ್ತೇನೆ ಎನ್ನುವುದು ಆಶ್ಚರ್ಯವಲ್ಲ. ನಾನು ದಾನ ಮಾಡಿದಷ್ಟು ನನ್ನ ವ್ಯಾಪಾರ ಇನ್ನೂ ಹೆಚ್ಚು ಹೆಚ್ಚಾಗುತ್ತದೆ. ಎನ್ನುವುದೇ ಆಶ್ಚರ್ಯ! ಇದು ನಿಷ್ಠೆಯಿಂದ ಕಾಯಕ ಮಾಡಿ, ಭಕ್ತಿಯಿಂದ ಸಮರ್ಪಣೆ ಮಾಡಿದಾಗ ಮಾತ್ರ ಸಾಧ್ಯ" ಎಂದರಂತೆ.

ಒಡೆದು ತಗ್ಗು ಪ್ರದೇಶದಲ್ಲಿ ನೀರು ನುಗ್ಗಿ ಅಪಾರ ಪ್ರಮಾಣದ ಹಾನಿ ಸಂಭವಿಸುವುದಲ್ಲದೆ, ಹಳ್ಳಿಗಳ ನಾಡು ಕೊಚ್ಚಿ ಹೋಗಿ ಪರಿಹಾರದ ರೂಪವಾಗಿ ನಷ್ಟವನ್ನು ತ್ತೆತ್ತಬೇಕಾಗುತ್ತದೆ. ಅದೇ ರೀತಿ ಒಬ್ಬ ವ್ಯಕ್ತಿ ಸಂಪತ್ತನ್ನು ಗಳಿಕೆ ಮಾಡುವುದು ಮುಖ್ಯವಲ್ಲ.

ಗಳಿಸಿದ 100% ಪ್ರಮಾಣದಲ್ಲಿ 10% ಪ್ರಮಾಣದಷ್ಟು ದಾಸೋಹವೆಂಬ ಗೇಟಿನ ಮೂಲಕ ವಿನಿಯೋಗ ಮಾಡಿದಂತೆಲ್ಲ ಪರಮಾತ್ಮ ಕೊಡುತ್ತಾ ಇರುತ್ತಾನೆ ಇಲ್ಲವಾದರೆ;

ಕಳ್ಳರಿಗೆ ಸುಳ್ಳರಿಗೆ ಡೊಂಬು ಗೊರವರಿಗೆ
ಕೊಡುವರು ಧರ್ಮಕ್ಕೆ ಎಳ್ಳಷ್ಟು ಕೊಡರು
ಸರ್ವಜ್ಞ.

ಎಂಬ ಸರ್ವಜ್ಞ ಕವಿಯ ವಾಣಿಯಂತೆ ಕಳ್ಳ, ಸುಳ್ಳ, ದರೋಡೆಕೋರರಿಗೆ, ತೆರಿಗೆದಾರರಿಗೆ ಕೊಡಬೇಕಾಗುವುದರಲ್ಲಿ ಸಂದೇಹವೇ ಇಲ್ಲ. ಅಂದಾಗ ಸರ್ವಜ್ಞ ಶರಣರು ಹೇಳಿದ ಮಾತಿನಲ್ಲಿ ದಾನವನ್ನು ಕೊಡದೆ ಇರಬಾರದು ಎಂಬ ಮಾತು ಅದೆಷ್ಟು



ಪುಟಾಣಿಗಳ ಪ್ರಪಂಚ

ದಾಹ ತೀರಿಸಿದ ಸನ್ಯಾಸಿ ?

✲ ಎಸ್.ಕಿರಣ್

ಒಂದು ಊರಿನಲ್ಲಿ ಒಬ್ಬ ಯುವಕನಿದ್ದ. ಅವನಿಗೆ ಅಗಾಧವಾದ ಹಸಿವಿನ ರೋಗವಿತ್ತು. ಎಷ್ಟು ತಿಂದರೂ ತೃಪ್ತಿ ಇಲ್ಲ. ತಳವಿಲ್ಲದ ಬಾವಿಯಂತಹ ಹೊಟ್ಟೆ, ಎಷ್ಟು ತಿಂದರೂ ಇಂಗದ ಹಸಿವು! ಮನೆ ಮದ್ದಾಯಿತು, ಆಲೋಪತಿ, ಹೋಮಿಯೋಪತಿ, ನಾಟಿ ಔಷಧಿ ಎಲ್ಲಾ ಪ್ರಯತ್ನಿಸಿದರು, ದೇವರಿಗೆ ಹರಕೆ ಹೊತ್ತರು. ಯಾವುದೂ ಫಲ ನೀಡಲಿಲ್ಲ. ಅವನಿಗೆ ಆಹಾರ ಹೊಂದಿಸುವುದೇ ಒಂದು ಸಮಸ್ಯೆಯಾಯಿತು. ಕೊನೆಗೆ ಅವನ ತಂದೆ ತಾಯಿ, ಅವನ ಬಂಧು ಬಳಗ ಎಲ್ಲಾ ಕೈ ಚೆಲ್ಲಿದರು! ಈಗಿನ ಕಾಲದವರಂತಲ್ಲ, ಆಗಿನ ಕಾಲದ ಜನ. ಅವನ ಊರಿನವರು ಯುವಕನ ಕುಟುಂಬಕ್ಕೆ ತುಂಬಾ ಸಹಾಯ ಮಾಡಿದರು. ಕೊನೆಕೊನೆಗೆ ಇದು ಊರಿನವಗೂ ಸಮಸ್ಯೆಗಯಾಗತೊಡಗಿತು. ಇಡೀ ಊರಿನಲ್ಲಿ ಆಹಾರದ ಕೊರತೆ ಕಂಡುಬಂತು. ಊರವರು ಅಸಮಧಾನ ಸೂಚಿಸುವ ಮೊದಲೇ ಅವನ ತಂದೆತಾಯಿ ಅವನನ್ನು ಊರಿಂದ ಹೊರಕಳಿಸುವ ವಿಚಾರ ಮಾಡಿದರು. ಎಲ್ಲೋ ದೂರದ ಆಶಾಭಾವನೆ ಮತ್ತು ಕರುಳಿನ ಸಂಕಟ ಇಷ್ಟು ದಿನ ಅವರನ್ನು ತಡೆಯುತಿತ್ತು. ಆದರೆ ಆಹಾರದ ಕೊರತೆ ಇಡೀ ಊರನ್ನೇ ವ್ಯಾಪಿಸಿದಾಗ ಅವರು ಗಟ್ಟಿ ನಿರ್ಧಾರ ತೆಗೆದುಕೊಳ್ಳಲೇ ಬೇಕಾಯಿತು.

ಊರವರು ಅಸಮಧಾನ ಸೂಚಿಸುವ ಮೊದಲೇ ಅವನ ತಂದೆತಾಯಿ ಅವನನ್ನು ಊರಿಂದ ಹೊರಕಳಿಸುವ ವಿಚಾರ ಮಾಡಿದರು. ಎಲ್ಲೋ ದೂರದ ಆಶಾಭಾವನೆ ಮತ್ತು ಕರುಳಿನ ಸಂಕಟ ಇಷ್ಟು ದಿನ ಅವರನ್ನು ತಡೆಯುತಿತ್ತು. ಆದರೆ ಆಹಾರದ ಕೊರತೆ ಇಡೀ ಊರನ್ನೇ ವ್ಯಾಪಿಸಿದಾಗ ಅವರು ಗಟ್ಟಿ ನಿರ್ಧಾರ ತೆಗೆದುಕೊಳ್ಳಲೇಬೇಕಾಯಿತು.

ಸ್ವಲ್ಪ ದಿನಗಳ ನಂತರ ಆ ಊರಿಗೆ ಒಬ್ಬ ಸನ್ಯಾಸಿಯ ಅಗಮನವಾಯಿತು. ಯುವಕನ ತಂದೆತಾಯಿ ಸನ್ಯಾಸಿಯ ಹತ್ತಿರ ಯುವಕನ ಸಮಸ್ಯೆಯನ್ನು ನಿವೇದಿಸಿಕೊಂಡರು. ಸಮಸ್ಯೆಯನ್ನು ಆಲಿಸಿದ ಸನ್ಯಾಸಿ ಸಾವಧಾನದಿಂದ ಹೀಗೆ-ಂದರು: "ಚಿಂತಿಸಬೇಡಿ, ಪರಿಹಾರವಿದೆ! ಈ ಯುವಕ ಇನ್ನು ಜೀವನ ಪೂರ್ತಿ ಒಬ್ಬನೆ ಕುಳಿತು ತಿನ್ನುವ ಹಾಗಿಲ್ಲ. ಊಟಕ್ಕೆ ಕುಳಿತಾಗ ನಾಲ್ಕು ಜನರೊಂದಿಗೆ ಹಂಚಿ ತಿನ್ನಬೇಕು. ಈ ನಿಯಮ ತಪ್ಪಿಸಿದರೆ ಮತ್ತೆ ಅಗಾಧವಾದ ಹಸಿವಿನ ರೋಗಕ್ಕೆ ಬಲಿಯಾಗುವ ಸಾಧ್ಯತೆಯಿದೆ." ಎಂದರು.

ಪರಿಹಾರದ ಬಗ್ಗೆ ಅನುಮಾನ ವಿದ್ದರೂ, ಅವರ ಸಲಹೆ ಪಾಲಿಸಿತೊಡಗಿದರು. ಯುವಕನೂ ಸನ್ಯಾಸಿಗಳು ಹೇಳಿದ ಹಾಗೆ ಮಾಡಲು ತೊಡಗಿದ. ಆಶ್ಚರ್ಯವೆಂಬಂತೆ ಯುವಕನ ಅಗಾಧವಾದ ಹಸಿವಿನ ರೋಗ ಪರಿಹಾರವಾಯಿತು. ಯುವಕ ಸ್ವಲ್ಪವೇ ತಿಂದರೂ ಸಂತೃಪ್ತಿಯನ್ನು ಅನುಭವಿಸಿದ.

ಒಂದು ದಿನ ಸನ್ಯಾಸಿ ಆಶೀರ್ವಾದ ವಚನ ಸಭೆಯಲ್ಲಿ ಹೀಗೆ ಹೇಳಿದರು **"ಅತಿ ಶ್ರೀಮಂತಿಕೆಯ ಅಥವಾ ಅತಿ ಹಣದಾಹವಿರುವವರು ಕೂಡ ಈ ಪರಿಹಾರವನ್ನು ಬಳಸಿ ಜೀವನದಲ್ಲಿ ಸಂತೃಪ್ತಿ ಹೊಂದಬಹುದು!"**

ಕೀಲು ನೋವಿಗೆ ಸರಳ ಪರಿಹಾರಗಳು

| ಪುನೀತ್ ಎಂ.ಜಿ.
ಮೂಲಲೇಖನ : ಡಾ.ಶಂಕರ್ ಪಾರಂಪರ್ಯ

ಮಾನವನ ದೇಹವು ಅತ್ಯಂತ ಸಂಕೀರ್ಣವಾದ ರಚನೆಯಾಗಿದೆ. ಬುದ್ಧಿ ಶಕ್ತಿಯಲ್ಲಿ ಮಾನವ ಎಲ್ಲಾ ಪ್ರಾಣಿಗಳಿಗಿಂತ ಮುಂದಿದ್ದಾನೆ ಎಂಬುದರಲ್ಲಿ ಸಂಶಯವೇ ಬೇಡ. ಆದರೂ ಬುದ್ಧಿಶಕ್ತಿಯನ್ನು ಮೀರಿ, ದೇಹದ ಅಂಗಾಂಗಗಳು ಕೈ ಕೊಡುವುದು ಸಾಮಾನ್ಯವಾಗಿ ಬಿಟ್ಟಿವೆ.

ಮಾನವನ ದೇಹದಲ್ಲಿರುವ 206 ಮೂಳೆಗಳಲ್ಲಿ ಯಾವಾಗ ಯಾವ ನೋವು ಬರುತ್ತದೆ ಎಂದು ಹೇಳುವುದು ಕಷ್ಟ. ಮಕ್ಕಳಿಗಾದರೆ ಇನ್ನೂ ಹೆಚ್ಚಿನ ಮೂಳೆಗಳಿರುವುದರಿಂದ ನೋವು ಬರುವುದು ತುಂಬಾ ಕಡಿಮೆ. ಆ ವಿಚಾರದಲ್ಲಿ ಮಕ್ಕಳು ಅದೃಷ್ಟ ಶಾಲಿಗಳು. ಕೀಲುಗಳು ಎಂದರೆ ಒಂದಕ್ಕಿಂತ ಹೆಚ್ಚು ಮೂಳೆಗಳು ಕೂಡುವ ಜಾಗ. ಇವು ನಡೆಯಲು. ಬಾಗಲು, ಸುತ್ತಲು, ಉರುಳಾಡಲು ಸಹಾಯ ಮಾಡುತ್ತವೆ. ಇವುಗಳನ್ನು ನಾವು ಕಾಪಾಡಿಕೊಳ್ಳುವುದು ತೀರಾ ಮುಖ್ಯವಾದ ಅಂಶ ಎಂಬುದನ್ನು ಮರೆಯಬಾರದು.

ಅಂಗಗಳ ನಿರಂತರ ಬಳಕೆಯಿಂದಾಗಿ ಕಾಲಾನುಕ್ರಮೇಣ ಅವು ಸವೆಯುವ ಸಾಧ್ಯತೆಗಳು ಹೆಚ್ಚಿಗೆ ಇರುತ್ತವೆ.

ಆರೋಗ್ಯ ಕಿರಣ



ಇದರಿಂದಾಗಿ ಹಲವಾರು ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ವಯಸ್ಸಾದಂತೆ ಈ ಸಮಸ್ಯೆಗಳು ಇನ್ನಷ್ಟು ಹೆಚ್ಚಾಗುತ್ತವೆ. ಅದರಲ್ಲೂ ಕೀಲು ನೋವು ಮಾತ್ರ ಸಹಿಸಲಾಗದಂತ ಭಾದೆಯಾಗಿದೆ.

ಒಂದು ಅಧ್ಯಯನದ ಪ್ರಕಾರ ದೇಶದಲ್ಲಿ ಶೇ.40 ಮಂದಿ ಕೀಲು ನೋವು ಸಂಬಂಧಿತ ಸಮಸ್ಯೆಗಳಿಂದ ನರಳುತ್ತಿದ್ದಾರೆ. ಬಹುತೇಕ ರೋಗಿಗಳಲ್ಲಿ ಈ ನೋವು ಕೈ ಮೀರಿ ಹೋಗಿರುತ್ತದೆ. ಕೀಲು ನೋವುಗಳಿಂದ ಸ್ವಲ್ಪ ಮಟ್ಟಿಗೆ ಪಾರಾಗಲು ಕೆಳಗೆ ನೀಡಿರುವ ಪರಿಹಾರಗಳನ್ನು ಪಾಲಿಸಿ

ದೀರ್ಘ ಕಾಲ ಕುಳಿತುಕೊಳ್ಳಬೇಡಿ: ನೋವಿರುವವರು ದೀರ್ಘ ಕಾಲ ಒಂದೇ ಕಡೆ ಕುಳಿತುಕೊಳ್ಳಬಾರದು. ಇದರಿಂದ ಕೀಲುಗಳು ವಿಪರೀತವಾಗಿ ಹಾಳಾಗುತ್ತವೆ. ಆದ್ದರಿಂದ ಆಗಾಗ ಎದ್ದು ಓಡಾಡುವುದು ಅಗತ್ಯ.

ಆರೋಗ್ಯಕರ ಭಂಗಿಯನ್ನು ಇರಿಸಿಕೊಳ್ಳಿ: ಬಾಗಿಕೊಂಡು, ಮಲಗಿದಂತೆ ಕೂರುವ ಅಭ್ಯಾಸವಿದ್ದರೆ ಬಿಟ್ಟು ಬಿಡಿ. ನಿಮ್ಮ ಭಂಗಿಯು ಸಹ ಕೀಲುಗಳ ಮೇಲೆ ಪ್ರಭಾವ ಬೀರುತ್ತದೆ. ನಡೆಯುವಾಗ ಮತ್ತು ಓಡುವಾಗ ಸಹ ಸರಿಯಾದ ಭಂಗಿಯನ್ನು ಇರಿಸಿಕೊಳ್ಳಿ. ಕೀಲು ಆರೋಗ್ಯಕರವಾಗಿರಬೇಕು ಎಂದಲ್ಲಿ, ಭಂಗಿ ಸರಿಯಾಗಿರಬೇಕು.





ದೇಹವನ್ನು ದಣಿಸಬೇಡಿ: ಒತ್ತಡ ಮತ್ತು ದಣಿವು ದೇಹಕ್ಕೆ ಒಳ್ಳೆಯದಲ್ಲ. ದೇಹವನ್ನು ದಣಿಸುವುದರಿಂದ ಕೀಲುಗಳ ಮೇಲೆ ಅಧಿಕ ಒತ್ತಡ ಬೀಳುತ್ತದೆ. ಆದ್ದರಿಂದ ಕೀಲುಗಳನ್ನು ಕಾಪಾಡಿಕೊಳ್ಳಲು ದೇಹವನ್ನು ದಣಿಯದಂತೆ ಕಾಪಾಡಿಕೊಳ್ಳಬೇಕು.

ವಿಶ್ರಾಂತಿ ಅಗತ್ಯ:

ದೈಹಿಕವಾಗಿ ವಿಶ್ರಾಂತಿ ಪಡೆಯಿರಿ. ಇದು ಕೀಲುಗಳ ಆರೋಗ್ಯಕ್ಕೆ ತುಂಬಾ ಒಳ್ಳೆಯದು. ವಿಶ್ರಾಂತಿ ಅಂಗಾಂಗಳಿಗೆ ಅಗತ್ಯವಾದ ಪುನಃಶ್ಚೇತನ ಒದಗಿಸುತ್ತದೆ. ಮುಂದೆ ಆಗುವ ಅನಾಹುತ ತಪ್ಪಿಸುತ್ತದೆ.

ಒಂದು ಒಳ್ಳೆಯ ಆಹಾರ ಸೇವಿಸಿ: ಆಹಾರವು ಸಹ ದೇಹದ ಮೇಲೆ ಪ್ರಭಾವ ಬೀರುತ್ತದೆ. ಹಾಗಾಗಿ ದಿನಕ್ಕೊಂದು ಬಾರಿಯಾದರೂ ಆರೋಗ್ಯಕರವಾದ ಆಹಾರ ಸೇವಿಸಿ. ಇದ-ರಿಂದ ಮೂಳೆಗಳಿಗೆ ಮತ್ತು ಕೀಲುಗಳಿಗೆ ಬೇಕಾದ ಅಗತ್ಯ ಪೋಷಕಾಂಶ ಲಭಿಸುತ್ತದೆ. ಹಾಗೂ ಕೀಲುಗಳು ಬಹುಕಾಲ ಆರೋಗ್ಯವಾಗಿರುತ್ತವೆ.

ಅಧಿಕವಾದ ಸ್ನಾಯು ಬೆಳೆಸಿಕೊಳ್ಳಬೇಡಿ: ಇತ್ತೀಚಿನ ದಿನದಲ್ಲಿ ಯುವಕರು ಪ್ಯಾಷನ್‌ಗೆ ಮೊರೆಹೋಗಿ ಅತಿಯಾಗಿ ಸ್ನಾಯು ಬೆಳೆಸಿಕೊಳ್ಳುತ್ತಾರೆ. ಆದರೆ ಅತಿಯಾದ ಸ್ನಾಯು ಒಳಗಿನ ಮೂಳೆ ಮೇಲೆ ಹೆಚ್ಚಿನ ಒತ್ತಡ ಬೀರುತ್ತದೆ. ದೇಹದಲ್ಲಿ ಸ್ನಾಯು ಇತಿ ಮಿತಿಯಲ್ಲಿರಬೇಕು. ಇಲ್ಲದಿದ್ದರೆ ಇದು ವಯಸ್ಸಾದ ಮೇಲೆ ದುಷ್ಪರಿಣಾಮ ಬೀರುತ್ತದೆ. ಅದೇ ರೀತಿ ಬೊಜ್ಜು ಕೂಡಾ ಒಳ್ಳೆಯದಲ್ಲ.

ವಯಸ್ಸಿಗೆ ಅನುಗುಣವಾಗಿ ಕೆಲಸ ಮಾಡಿ: ವಯಸ್ಸಿಗೆ ಅನುಗುಣವಾಗಿ ಕೆಲಸ ಮಾಡುವುದು ಕೀಲು ನೋವಿಗೆ ಉತ್ತಮ ಪರಿಹಾರ. ಕೆಲಸಗಳೂ ಕೂಡಾ ಮೂಳೆ ಹಾಗೂ ಕೀಲು ಮೇಲೆ ಒತ್ತಡ ತರುತ್ತವೆ. ಯಾವಾಗಲು ಈ ವಯಸ್ಸಿನಲ್ಲಿ ನಾನು ಈ ಕೆಲಸ ಮಾಡಬಹುದಾ? ಎಂಬ ಪ್ರಶ್ನಿಸಿಕೊಂಡು ನಂತರ ಹೆಜ್ಜೆ ಮುಂದಿಡಿ. ಕೀಲು ನೋವಿದ್ದಾಗ ವಿಶ್ರಾಂತಿ ಅಗತ್ಯ. ಆಗಂತ ಸೋಮಾರಿಯಾದರೆ ಇನ್ನೇನಾದರೂ ನೋವು ಬರುವ ಸಾಧ್ಯತೆ ಹೆಚ್ಚಿರುತ್ತದೆ.

ಪ್ರತಿದಿನ ವ್ಯಾಯಾಮ ಮಾಡಿ:

ದೇಹ ಹಾಗೂ ಮನಸ್ಸು ಆರೋಗ್ಯವಾಗಿರಬೇಕೆಂದರೆ ಪ್ರತಿ ದಿನ ಕೆಲವಾದರೂ ವ್ಯಾಯಾಮ ಮಾಡಲೇಬೇಕು. ವ್ಯಾಯಾಮ ಆರೋಗ್ಯ ಕಾಪಾಡುವುದರ ಜತೆ ಅನಾರೋಗ್ಯವನ್ನು ದೂರವಿಡುತ್ತದೆ. ನೋವಿನಿಂದ ಬಳಲುತ್ತಿರುವವರು

ವ್ಯಾಯಾಮ ಮಾಡುವ ಮೊದಲು ಈ ವ್ಯಾಯಾಮ ಮಾಡಬಹುದೇ ಎಂಬುದನ್ನು ವೈದ್ಯರಿಂದ ತಿಳಿದುಕೊಳ್ಳಿ.

ವಾರಕೊಮ್ಮೆಯಾದರೂ ಮಸಾಜ್ ಮಾಡಿಕೊಳ್ಳಿ: ಎಣ್ಣೆ ಹಚ್ಚಿ ಸ್ನಾನ ಮಾಡಿಕೊಳ್ಳುವ ಸಂಸ್ಕೃತಿ ಪ್ರಸ್ತುತ ಮರೆಯಾಗುತ್ತದೆ. ಕೀಲುಗಳ ನಡುವೆ ಜೆಲ್ ಇರುತ್ತದೆ. ಇದು ಒಣಗಿದರೆ ನೋವು ಬರುತ್ತದೆ. ಪೂರಾ ದೇಹಕ್ಕೆ ಕನಿಷ್ಠ ವಾರಕೊಮ್ಮೆಯಾದರೂ ಒಳ್ಳೆ ಮಸಾಜ್ ಮಾಡಿಕೊಳ್ಳಿ. ಶುದ್ಧ ಹಾಗೂ ನೈಸರ್ಗಿಕ-ಮಸಾಜ್‌ಗಾಗಿಯೇ ತಯಾರಿಸಿರುವ ಪಾರಂಪರ್ಯದಂತಹ ಎಣ್ಣೆಯನ್ನು ಮಸಾಜ್‌ಗೆ ಬಳಸಿದರೆ ಉತ್ತಮ.

ವೈದ್ಯರನ್ನು ಭೇಟಿ ಮಾಡಿ:

ನೋವು ಹೆಚ್ಚಾದರೆ, ಇದು ಕರ್ಮ, ಹಿಂದಿನ ಜನ್ಮದ ಶಾಪ ಎಂದು ಕೂರದೆ ವೈದ್ಯರನ್ನು ಸಂಪರ್ಕಿಸಿ. ಅದರಲ್ಲೂ ಆಯುರ್ವೇದ ಡಾಕ್ಟರ್ ಭೇಟಿಯಾಗುವುದು ಉತ್ತಮ. ನೋವು ಹೆಚ್ಚಾದರೆ, ಅದು ದೇಹವನ್ನು ಸಂಪೂರ್ಣ ದಂಡಿಸುತ್ತದೆ.

ಕೊನೇ ಸೂಚನೆ:

ಈ ಲೇಖನದಲ್ಲಿ ಕೊಡಲಾಗಿರುವ ಎಲ್ಲ ವಿಷಯಗಳನ್ನು ನಮ್ಮ ಕೈಯಲ್ಲಿ ಮಾಡುವುದಕ್ಕೆ ಆಗದೆ ಇರಬಹುದು. ಕಾರಣ, ನಮಗೆ ಹಣದ ಸಮಸ್ಯೆ ಇರಬಹುದು, ನೀರು ಮತ್ತಿತರ ಪ್ರಾಮುಖ್ಯ ಅವಶ್ಯಕತೆಗಳ ಕೊರತೆ ಇರಬಹುದು ಅಥವಾ ಬೇರೆ ಯಾವುದಾದರೂ ಸಮಸ್ಯೆ ಇರಬಹುದು. ಆದರೂ ಈ ಲೇಖನದರಲ್ಲಿರುವ ಕೆಲವೊಂದು ಅಂಶಗಳನ್ನಾದರೂ ಪಾಲಿಸಲು ನಮಗೆ ಸಾಧ್ಯವಿದೆ. ಜಾಣನು ಕೇಡನ್ನು ಕಂಡು ಅಡಗಿಕೊಳ್ಳುವನು; ಬುದ್ಧಿಹೀನನು ಮುಂದೆ ಹೋಗಿ ನಷ್ಟಪಡುವನು ಅಂತ ಹಿಂದೆ ಇದ್ದ ವಿವೇಕಿಯೊಬ್ಬ ಹೇಳಿರುವ ಮಾತನ್ನು ಅನ್ವಯಿಸಿಕೊಳ್ಳಿ

ಎನ್ನಿಸುತ್ತದೆ. ಪ್ರಪ್ರಥಮವಾಗಿ ಲಿಂಗಾಯತ ದರ್ಮಿಯರಾದ, ನಾವು ಗಣಪತಿಯ ಪೂಜೆ ಮಾಡಬಾರದು ಏಕೆಂದರೆ, ನಮ್ಮ ಗಣಪತಿ ಧರ್ಮಗುರು ಬಸವಣ್ಣನವರು, ಗಣ ಎಂದರೆ ಸಮೂಹ, ಪತಿ ಎಂದರೆ ಒಡೆ-ಯ ಎಂದರ್ಥ. ನಮ್ಮ ಲಿಂಗಾಯತ ಧರ್ಮದ ಒಡೆಯ ಧರ್ಮಪಿತ ವಿಶ್ವಗುರು ಬಸವಣ್ಣನವರು. ಹಾಗಾಗಿ ಲಿಂಗಾಯತ ಧರ್ಮಿಯರಾದ ನಾವು ಯಾವುದೇ ಕಾರ್ಯವನ್ನು ಪ್ರಾರಂಭಿಸುವ ಮೊದಲು ಗುರು ಬಸವಣ್ಣನವರ ಪೂಜೆಯನ್ನೇ ಮಾಡಬೇಕೆಂದು ಪೂಜ್ಯ ಮಾತಾಜಿಯವರು ಕಡ್ಡಾಯ ಗೊಳಿಸಿದ್ದಾರೆ.

ಶಿವಯೋಗಿ ಸಿದ್ಧರಾಮೇಶ್ವರರು ಹೇಳಿರುವಂತೆ ಮೊಟ್ಟ ಮೊದಲು ಧರ್ಮಗುರು ಬಸವಣ್ಣನವರನ್ನು ಪೂಜಿಸಬೇಕು ಎಂದು ಈ ಕೆಳಗಿನ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

ಪ್ರಥಮಂತು ಬಸವಣ್ಣ ದ್ವಿತಿಯಂತು ಲಿಂಗವು ತೃತಿಯಂತು ತತ್ವ ಬ್ರಹ್ಮಾಂಡವೆಲ್ಲ ಅಕಳಂಕ ಗುಣನಿಧಿ ಚಿದಾನಂದ ಬಸವಂಗೆ ಭಕುತನಾದೆನು ಗುರುವೆ ಯೋಗಿನಾಥ

1947ನೇ ಇಸವಿ ದೇಶಕ್ಕೆ ಸ್ವಾತಂತ್ರ್ಯ ಧ್ವಜ ಏರಿದ ಸಂಭ್ರಮದ ವರ್ಷ. ಸ್ವಾತಂತ್ರ್ಯದ ಮುನ್ಸೂಚನೆಯ ಪ್ರತೀಕವೆಂಬಂತೆ "1946- ಗುರು ಬಸವ ಧ್ವಜವನ್ನು ಹಾರಿಸಲು ಬಂದ ಮಹಾ ಯೋಗಿಣಿ ಧರೆಗಿಳಿದ ಸಂಭ್ರಮದ ವರ್ಷ. ಅವರೇ ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರು ಡಾ ಮಾತೆ ಮಹಾದೇವಿಯವರು ಜಗತ್ತಿಗೆ ಪಾದವಿಟ್ಟ ಪವಿತ್ರ ದಿನ. ಜಗತ್ತಿನ ಇತಿಹಾಸದಲ್ಲೊಂದು ಅದ್ಭುತ ಕ್ರಾಂತಿಯ ಗಂಗೋತ್ರಿ 21ನೇ ಶತಮಾನದಲ್ಲಿ ಚಿನ್ಮೂಲಾದ್ರಿ ಚಿತ್ಕಳೆ ಧರಿಗಿಳಿದ ದಿನ ಬಸವ ಯುಗವು ಪುನರ್ ಸೃಷ್ಟಿಗೊಂಡ ದಿನ ಅದುವೆ ಪೂಜ್ಯ ಸದ್ಗುರು ಮಾತಾಜಿಯವರು ಧರೆಗಿಳಿದ ದಿನ. ಶರಣೆ ಲೀಲಾವತಿ ನಾಡಗೌಡರು ಹೆಮ್ಮೆಯಿಂದ ಹೇಳುವಂತೆ "ವಿಶ್ವದ ಏಳು ಅದ್ಭುತಗಳ ಸಾಲಿನಲ್ಲಿ ಎದ್ದು ನಿಲ್ಲುವ ದೀರೋದಾತ್ತ ನಿಲುವು ಪಡೆದ ಬಸವ ಚಿತ್ಕಳೆ ಎಂದರೆ ಪೂಜ್ಯ ಮಾತಾಜಿಯವರು ಎಂದಿದ್ದಾರೆ. ಆದಿ ಶರಣದ ಸಂಕಲ್ಪವೂ ಆಗಿದೆ. ಇಂತಹ ಅಪೂರ್ವ ಸ್ತ್ರೀರತ್ನ ಜಗತ್ತಿನಲ್ಲಿ ಉದಯಿಸಿ ಬಸವ ಧರ್ಮದ ಪುನರುದ್ಧಾರಕ್ಕಾಗಿ ತಮ್ಮ ಎಲ್ಲಾ ವೈಭೋಗವನ್ನು ತ್ಯಾಗ ಮಾಡಿ ಬಸವ ಧರ್ಮಕ್ಕೋಸ್ಕರ ತಮ್ಮ ಜೀವ ಮುಡಿಪಾಗಿಟ್ಟು ಬಸವ ತತ್ವ ಹೊತ್ತು ಮನೆ ಮನೆ ಬಾಗಿಲಿಗೆ ಊರಿಂದೂರಿಗೆ ಧರ್ಮ ಪ್ರಚಾರ ಮಾಡುತ್ತಾ ಬಸವ ಬೆಳಕನ್ನು ಜಗತ್ತಿನಾದ್ಯಂತ ಚೆಲ್ಲುತ್ತಾ ಯಾರೇನೇ ಅಂದರೂ ಇಟ್ಟ ಹೆಜ್ಜೆಯನ್ನು ಹಿಂದಿಡದೆ ದಿಟ್ಟ ಹೆಜ್ಜೆಯನ್ನಿಡುತ್ತಾ ಲಿಂಗಾಯತ ಧರ್ಮದ ಕಹಳೆಯನೂದುತ್ತಾ ಸಾಗಿಹ ಈ ಮಹಾ ಯೋಗಿಣಿಯ ಬಗ್ಗೆ ನೀಲಮ್ಮ ತಾಯಿಯು ತಮ್ಮ ಕಾಲಜ್ಞಾನ ವಚನದಲ್ಲಿ ಹೀಗೆ ಸಂಭೋಧಿಸಿದ್ದಾರೆ.

ನಾರಿ ಒಬ್ಬಳು ಒಂದು ಬಾರಿ ಅಬ್ಬರ ಹೊತ್ತು ಆರೂಡ ಬಿಕ್ಷೆ ಬೇಡ್ಯಾಳು ನಾವು ನಮ್ಮ ವೀರ ಬಸವಣ್ಣ ಬರುವಾಗ

ಎಂದಿದ್ದಾರೆ. ವಿಶ್ವ ಗುರು ಬಸವಣ್ಣನವರು ಕಲ್ಯಾಣ ತೊರೆದು ಹೋಗುವ ಸಮಯದಲ್ಲಿ ಕೆಲವರು ಅವರನ್ನು ಕೇಳುತ್ತಾರೆ, ಅಪ್ಪನವರೆ ನೀವು ಮತ್ತೆ ಯಾವಾಗ ಬರುವುದು? ಗುರು ಬಸವಣ್ಣನವರು ಹೇಳಿದರು ನಾವು ಬರುವುದಿಲ್ಲ ನಮ್ಮವರು ಬರುತ್ತಾರೆ ಅಂತ. ಅವರೇ ಈ ಸುಪ್ಪಾಣಿಯ ಮುತ್ತು ಮಾತಾಜಿ.

ಶರಣ ಬಸಪ್ಪ ಮತ್ತು ಶರಣೆ ಗಂಗಮ್ಮನವರ ಚಿದ್ ಗರ್ಭದಲ್ಲಿ ಜನಿಸಿದ ಅಮೂಲ್ಯ ರತ್ನ ಪೂಜ್ಯ ಮಾತಾಜಿಯವರು. ಚಿಕ್ಕವರಿರುವಾಗಲೇ ಪೂಜೆ ಪುನಸ್ಕಾರಗಳಲ್ಲಿ ಆಶಕ್ತರಾದವರು. ಅಪಾರ ಬುದ್ಧಿವಂತಿಕೆ , ತೀಕ್ಷ್ಣಮತಿ ವೈಚಾರಿಕ ದೃಷ್ಠಿ ಬಾಲ್ಯದಿಂದಲೇ ಬಂದುದು. ಈ ದೃಷ್ಠಿಕೋನವೇ

ಅವರನ್ನು ಬಸವ ಪಥಕ್ಕೆ ಬರಲು ಮೂಲ ಕಾರಣವಾಯಿತು. 21ನೇ ಶತಮಾನದಲ್ಲಿ ಬಸವ ಯೋಗಿ ಪ್ರವಚನ ಪಿತಾಮಹಾರೆನಿಸಿಕೊಂಡ ಪರಮ ಪೂಜ್ಯ ಲಿಂಗಾನಂದ ಸ್ವಾಮೀಜಿಯವರ ಪ್ರಭಾವ ಸುತ್ತಮುತ್ತಲೂ ಹರಡಿತು. ಆ ಪ್ರಭಾವಕ್ಕೆ ಒಳಗಾಗಿ ಶರಣರು ಅವರಿದ್ದೆಡೆಯಲ್ಲಿ ದಾವಿಸಿ ಬರುತ್ತಿದ್ದರು. ಬಸವಾಮೃತವನ್ನು ಸವಿದು ಬಸವ ಚಿತ್ಕಿರಣಗಳಾಗಿ ಪರಿವರ್ತನೆಯಾಗುತ್ತಿದ್ದರು. ಇಂತಹ ಸುಸಂದರ್ಭ ಪೂಜ್ಯ ಮಾತಾಜಿಯವರಿಗೂ ಒದಗಿ ಬಂದಿತು.

ಚಿತ್ರದುರ್ಗದಲ್ಲಿ ಸದ್ಗುರು ಲಿಂಗಾನಂದ ಅಪ್ಪಾಜಿಯವರ ಪ್ರವಚನದ ವಿಷಯ **ಅನುಭವ ಮಂಟಪ** ಆ ಒಂದು ವಿಶೇಷ ದಿನ. ಪೂಜ್ಯರ ಮನ ಪರಿವರ್ತನೆಯ ಶುಭದಿನ. ಬಸವ ತಂದೆ ಪೂಜ್ಯ ಮಾತಾಜಿ ಅವರನ್ನು ಆರಿಸಿಕೊಂಡ ಶ್ರೇಷ್ಠ ದಿನ. ಅಕ್ಕಮಹಾದೇವಿ ಅವರ ಆಶಯ ಪೂರೈಸಿದ ದಿನ. ಪೂಜ್ಯ ಮಾತಾಜಿ ಲಿಂಗಾನಂದ ಅಪ್ಪಾಜಿ ಪ್ರವಚನದಿಂದ ಪ್ರಭಾವಿತರಾಗಿ ಅಂದೇ ಗುರು ಬಸವಣ್ಣನ ಅವರನ್ನು ತಮ್ಮ ಹೃದಯದಲ್ಲಿ ತುಂಬಿಕೊಂಡರು. ಅಂದೇ ಬಸವ ಧರ್ಮಕ್ಕೆ ತಮ್ಮ ಜೀವ ಮುಡಿಪಾಗಿಟ್ಟರು. ಸದ್ಗುರು ಲಿಂಗಾನಂದ ಸ್ವಾಮೀಜಿಯಿಂದ ಜಂಗಮ ಧೀಕ್ಷೆ ತೆಗೆದುಕೊಂಡು ಸಂಕಲ್ಪ ತೊಟ್ಟರು.

ಜೀವವಿರುವ ತನಕ ಬಸವ ಗುರು ಸೇವೆಯಲ್ಲೇ ನನ್ನ ಬಾಳನ್ನು ಮುಡಿಪಾಗಿಡುವೆ. ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಅವರ ಸಂದೇಶವನ್ನು ಜಗತ್ತಿನಾದ್ಯಂತ ಪಸರಿಸುವ ದಿಟ್ಟ ನಿಲುವು ತಳೆದು, ದೆಹಲಿಯಲ್ಲಿ ಬಸವಧ್ವಜ ಹಾರಿಸುತ್ತಾ ಕಹಳೆಯನ್ನೂದಿದ ಮೊಟ್ಟ ಮೊದಲ ಕ್ರಾಂತಿ ಯೋಗಿಣಿ ಮಾತಾಜಿಯವರು.

ಜಾನಪದರು ಗುರು ಬಸವಣ್ಣನವರನ್ನು ಕುರಿತು ಹೇಳಿರುವ

ಎಲ್ಲಾ ಬಲ್ಲಿದನಯ್ಯಾ ಕಲ್ಯಾಣ ಬಸವಯ್ಯ ಚೆಲ್ಲಿದನು ತಂದು ಶಿವ ಬೆಳಗ ನಾಡೊಳಗೆ

ಓದುಗರಿಗೆ ವಿಶೇಷ ಸೂಚನೆ

ಶರಣ ಬಂಧುಗಳೆ ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿ ದ್ದಲ್ಲಿ ವಿಶೇಷ ಲೇಖನಗಳನ್ನು ಡಿಟಿಪಿ ಮಾಡಿ **basavakumaraswamiji@gmail.com** ಮೇಲ್ ಅಡ್ರೆಸ್‌ಗೆ ಲೇಖನಗಳನ್ನು ಕಳಿಸಬಹುದು.

ನಿಮ್ಮ ಕುಟುಂಬದಿಂದಲೂ ಶರಣರ ಹಬ್ಬಗಳಿಗೆ ಶುಭಾಶಯ ಕೋರಬಹುದು. ಕುಟುಂಬದ ಅಥವಾ ಒಬ್ಬರ ಫೋಟೋ ಕಳುಹಿಸದರೆ ನಿಮ್ಮ ಫೋಟೊ ವನ್ನು ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗೆ ಸಂಪರ್ಕಸಿ ಶ್ರೀ ಬಸವ ಕುಮಾರ ಸ್ವಾಮೀಜಿ
ಮೊ.9449588669.

ಸೊಲ್ಲೆತ್ತಿ ಜನವು ಹಾಡುವುದು ಎಂದು ಸಂಭ್ರಮದಿಂದ ಹಾಡಿದರೆ

ಇಂದು ಗುರು ಮಾತಾಜಿಯವರನ್ನು ಕುರಿತು **ಎಲ್ಲಾ ಬಲ್ಲಿದರಯ್ಯಾ ಬಸವಾತ್ಮಜೆ ಇವರು, ಚೆಲ್ಲಿದರು ತಂಧು ಬಸವ ಬೆಳಗ ಚೆಲ್ಲಿದರು ತಂದು ಬಸವ ಬೆಳಕ ನಾಡೋಳಗೆ ಸೊಲ್ಲೆತ್ತಿ ಜನವು ಹಾಡುವುದು**

ಎಂದು ಸಂಭ್ರಮದಿಂದ ಹಾಡಿ ನಲಿಯುತ್ತಿದ್ದಾರೆ ಇಂದಿನ ಶರಣರು.

ವಚನಕಾರರೆಂದರೆ ಮೊಟ್ಟ ಮೊದಲು ನೆನಪಾಗುವ ವ್ಯಕ್ತಿಯೆಂದರೆ ಗುರು ಬಸವಣ್ಣನವರು, ಪ್ರವಚನಕಾರರೆಂದರೆ ಗುರು ಲಿಂಗಾನಂದ ಅಪ್ಪಾಜಿಯವರು ಹಾಗೆಯೇ ಬಸವತತ್ವ ನಿಷ್ಠರೆಂದರೆ ಪೂಜ್ಯ ಡಾ। ಮಾತಾಜಿಯರು. ಮಾನವರೆಲ್ಲರನ್ನು ಒಗ್ಗೂಡಿಸಲು ಸರ್ವ ಸಮಾನತೆ ತತ್ವ ಬಿಂಬಿಸಲು ಬಸವ ಧರ್ಮ ಧ್ವಜ ಹಾರಿಸಿ ಎಲ್ಲರನ್ನು ಒಂದು ಗೂಡಿಸುತ್ತಾ ಗುರು ಬಸವಣ್ಣನವರ ತತ್ವ ಸೌರಭ ಹರಡಲು ವೀರ ಕಂಕಣ ಕಟ್ಟಿದ್ದಾರೆ, ಧರ್ಮದ ಕವಚ ಧರಿಸಿದ್ದಾರೆ, ತತ್ವದ ಖಡ್ಗ ಹಿಡಿದಿದ್ದಾರೆ, ಕರ್ತನ ಕಮ್ಮಟ ವಾದಿ ಜಗದೊಳು ಕಲ್ಯಾಣ ರಾಜ್ಯ ಕಟ್ಟುವೆನು ಎಂದು ದಿಟ್ಟ ಹೆಜ್ಜೆ ಇಟ್ಟು ಮುನ್ನಡೆಯುತ್ತಿದ್ದಾರೆ.



111 ಅಡಿ ಎತ್ತರದ ಬಸವ ಪುತ್ಥಳಿ

ಬೆಂಗಳೂರು–ಮೈಸೂರು ಹೆದ್ದಾರಿಯ ಮೇಲಿರುವ ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ

ಬೆಂಗಳೂರಿನಿಂದ ಮೈಸೂರು ಹೆದ್ದಾರಿಯ ಮೇಲೆ 20 ಕಿಲೋಮೀಟರ್ ದೂರದಲ್ಲಿ ವಿಶ್ವಕಲ್ಯಾಣ ಮಿಷನ್ ಒಡೆತನದ 'ಬಸವ ಗಂಗೋತ್ರಿ' ಎಂಬ ಆಶ್ರಮವಿದೆ. ಇಲ್ಲಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಹೆಸರಿನ ಜ್ಞಾನಪೀಠವೂ ಸ್ಥಾಪನೆಯಾಗಿ ಇದಕ್ಕೆ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾಧಿಪತಿಗಳಾಗಿದ್ದಾರೆ. ಇಲ್ಲಿ ಅನಾಥಾಲಯ ಮತ್ತು ವೃದ್ಧಾಶ್ರಮಗಳು ನಡೆಯುತ್ತಲಿವೆ. ತೆಂಗಿನ ತೋಟದೊಡನೆ ಸುಂದರವಾದ ಪರಿಸರ ಹೊಂದಿರುವ ಬಸವ ಗಂಗೋತ್ರಿಯಲ್ಲಿ ಗುರು ಬಸವಣ್ಣನವರ ಬೃಹತ್ ಪುತ್ಥಳಿ ಆಗಬೇಕೆಂದು ವಿಶ್ವಕಲ್ಯಾಣ ಮಿಷನ್ ಚೇರ್ಮನ್ನರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅಪೇಕ್ಷಿಸಿದ್ದರು. ಆದ್ದರಿಂದ 111 ಅಡಿ ಬೃಹತ್ ಪುತ್ಥಳಿಗೆ ಶಂಕುಸ್ಥಾಪನೆ ಸಹ ಮಾಡಲಾಗಿದೆ. ಮಟ್ಟಸವಾದ ಬಯಲಿನಲ್ಲಿ ಮಾಡಬೇಕಾಗಿರುವುದರಿಂದ 6 ಮೆಟ್ಟಲಿನ 30 ಅಡಿ ಎತ್ತರದ ಪೀಠವನ್ನು ಮಾಡಿ ಅದರ ಮೇಲೆ ಇಷ್ಟಲಿಂಗ ಪೂಜೆ–ತ್ರಾಟಕ ಯೋಗದಲ್ಲಿ ನಿರತ ಗುರು ಬಸವಣ್ಣನವರನ್ನು ರೂಪಿಸಲಾಗುವುದು.

ಪೀಠದ ಕೆಳಭಾಗದಲ್ಲಿ ಒಂದು ಧ್ಯಾನ ಮಂಟಪವನ್ನು ಮತ್ತು ಸಪ್ತ ಗಣಾಧೀಶರ ಮೂರ್ತಿಗಳು ಸಹಿತವಾದ ಶರಣ ಮಂಟಪವನ್ನು– ಹೀಗೆ 3 ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಷಡ್‌ಗಣಾಧೀಶರಾದ ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು, ಚಿನ್ಮಯಜ್ಞಾನಿ ಚನ್ನಬಸವಣ್ಣ, ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರ ಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರ ಗವಿಗಳನ್ನು ಗೋಳಾಕಾರದಲ್ಲಿ ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಶರಣೋದ್ಯಾನವನ್ನು ನಿರ್ಮಿಸಲಾಗುವುದು. ಧರ್ಮಪಿತ ಬಸವಣ್ಣನವರ ತತ್ತ್ವಗಳ ಪ್ರಚಾರ ಮಾಡಲು ಬೃಹತ್ ಸ್ಮಾರಕಗಳು ಸಾಧಕವಾಗುತ್ತವೆಂಬ ಮನೀಷೆಯಿಂದ ಈ ಬೃಹತ್ ಪುತ್ಥಳಿಯನ್ನು ನಿರ್ಮಿಸಲಾಗುತ್ತಿದೆ. ಬಸವ ಗಂಗೋತ್ರಿಯಲ್ಲಿ ನಡೆಯುತ್ತಿರುವ ಅನಾಥಾಲಯ, ವೃದ್ಧಾಶ್ರಮಗಳಿಗೆ ಸ್ವತಂತ್ರವಾದ ಕಟ್ಟಡ ಆಗಬೇಕಾಗಿದೆ. ಆದ್ದರಿಂದ ಈ ಎಲ್ಲ ಕೆಲಸಗಳಿಗೆ ಉದಾರವಾದ ಧನಸಹಾಯದ ಅಗತ್ಯವಿದೆ.

ಬಸವ ಗಂಗೋತ್ರಿಯ ಕೆಲಸಗಳು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಿಂದ ನಡೆಯುತ್ತಿದ್ದು ಇದಕ್ಕೆ 80ಜಿ ಇನ್‌ಕಂ ಟ್ಯಾಕ್ಸ್ ಸೌಲಭ್ಯವಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:

✖ ಪೂಜ್ಯ ಶ್ರೀ ಜಗದ್ಗುರು ಡಾ.ಮಾತೆ ಮಹಾದೇವಿ ಬಸವ ಮಂಟಪ ರಾಜಾಜಿನಗರ, ಬೆಂಗಳೂರು–560 010. 9448137508, 9449588669

ಓಂ ಶ್ರೀ ಗುರು ಬಸವಲಿಂಗಾಯ ನಮಃ
866666







ಪೂಜ್ಯಶ್ರೀ ಮಹಾಜಗದ್ಗುರು

ಡಾ.ಮಾತೆ ಮಹಾದೇವಿಯವರ

71ನೇ ವರ್ಧಂತಿ ಮಹೋತ್ಸವ

13–3–2016, ಭಾನು(ದೇವ)ವಾರ ಬೆಳಗ್ಗೆ 10.30 ರಿಂದ

ಬೆಂಗಳೂರಿನ ಪುರಭವನದಲ್ಲಿ (ಸಿಟಿ ಮಾರುಕಟ್ಟೆ ಸಮೀಪ)

ಪೂಜ್ಯ ಮಾತಾಜಿಯವರು 13–3–1946 ರಂದು ಶರಣ ಡಾ|| ಎಸ್. ಆರ್. ಬಸಪ್ಪ ಮತ್ತು ಶರಣೆ. ಬಿ. ಗಂಗಮ್ಮನವರ ಮಗಳಾಗಿ ಜನಿಸಿದ್ದು 13–3–2016 ರಂದು 70 ವರ್ಷ ಪೂರೈಸಿ 71ಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಆದ್ದರಿಂದ ಅವರ 71ನೇ ವರ್ಧಂತಿಯನ್ನು ಅಂದು ಬೆಂಗಳೂರು ನಗರದ ಮಧ್ಯಭಾಗದಲ್ಲಿರುವ ನವೀಕೃತ ಸರ್. ಕೆ.ಪಿ. ಪುಟ್ಟಣ್ಣ ಶೆಟ್ಟಿ ಪುರಭವನದಲ್ಲಿ ಆಚರಿಸಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಪೂಜ್ಯ ಮಾತಾಜಿಯವರಿಗೆ ಶುಭ ಹಾರೈಸಬೇಕೆಂದು ವಿನಂತಿಸುತ್ತೇವೆ.


ಶುಭ ಕೋರುವವರು
ಶರಣ. ಅಭಿಷೇಕ್,
ಶರಣ. ಅಶೋಕ್ ಭಾವಿಗೆ,
ಶರಣೆ. ಅನಿತಾ ಅಶೋಕ್ ಭಾವಿಗೆ

ಮಾ.13ರಂದು ಬೆಳಗ್ಗೆ 11 ಗಂಟೆಗೆ ಬಸವ ಮಹಾಮನೆಯಲ್ಲಿ ಶರಣ.ಅಭಿಷೇಕ್‌ಗೆ ಇಷ್ಟಲಿಂಗದೀಕ್ಷೆ ನೀಡಲಾಗುವುದು. ಎಲ್ಲ ಶರಣ ಶರಣೆಯರು ಭಾಗಿಯಾಯಾಬೇಕೆಂದು ಕೋರಲಾಗುತ್ತಿದೆ.



ಶರಣ. ಎನ್. ಪುಟ್ಟರುದ್ರ
ಗೌರವಾಧ್ಯಕ್ಷರು.
ಲಿಂಗಾಯತ ಧರ್ಮ ಮಹಾಸಭಾ ಬೆಂಗಳೂರು

ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿ
ಪ್ರಧಾನ ಕಾರ್ಯದರ್ಶಿ,
ಬಸವಮಂಟಪ. ಮೊ–9449588669



Registered with Registrar of News Papers in India, New Delhi No.19988/70 Postal Registration (SSP os BG-West Dn) No.KA/BGW-50/WPP-17/2015-17, Linced to Post the Printed Magazine without Prepayment (WPP-17). Posted at Bengaluru PSO. Mysuru Road (Bg-560026) on 3rd, 10th, 20th of every month. Pages 32+4 (Cover Pages)